ಜನಪದ ವಿಚಾರ

ಬೆಲೆ : ರೂ ೨೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೭ ನವೆಂಬರ್ -೨೦೧೬ ಸಂಚಿಕೆ - ೪

ಭಾರತ-ಪಾಕ್ ಯುದ್ಧ ಕೂಡದು

*

ಬಿಸಾಡಲ್ಪಡುವ ಸಂಸ್ಕೃತಿಯ ಸಿಕ್ಕಿನಲ್ಲಿ ಟೆಕ್ಕಿಗಳು!

*

ಕನ್ನಡಕುಲ ಪ್ರಜ್ಞೆ

*

ಕರ್ಮ, ವಿಕರ್ಮ, ಅಕರ್ಮ

ಜನಪದ ವಿಚಾರದಲ್ಲಿ

ನವೆಂಬರ್- ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ನವೆಂಬರ್ – ೨೦೧೬

ಸಂಪುಟ – ೧೭

ಸಂಚಿಕೆ – ೪

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೨೦೦/-

ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್ (ರಿ)

ಮೇಲುಕೋಟೆ – 571431

ಮಂಡ್ಯ ಜಿಲ್ಲೆ

ಫೋನ್ : 9141700812

08236 – 299854

email :
janapada@yahoo.com

Web: janapada.org

ಪರಿಸರ ಗೀತೆ

ಸ್ವಚ್ಛವಾಗಿ ಇಡುವ ಬನ್ನಿ
ಭೂಮಿಯ ಒಡಲನು,
ಮಾಲಿನ್ಯವ ಮಾಡಿದರೆ
ಮೆಚ್ಚನ್ನು ಆ ದೇವನು.

ನಿರ್ಮಲ ಮನ, ನಿರ್ಮಲ ಮನೆ
ನಮದಾಗಲಿ ಗುರಿಯು,
ಶುಚಿತ್ವದಲಿ ಜಗ ಬೆಳಗಲು
ಅದುವೆ ಹೆಮ್ಮೆಯ ಗರಿಯು.

ನಮ್ಮ ಕೆರೆ, ನದಿಗಳಿಂದ
ನಮಗೆ ಜೀವಧಾರೆಯು,
ಪ್ರಕೃತಿಯನು ಉಳಿಸಿ, ಬೆಳೆಸಿ,
ನಾವಾಗುವ ಚಿರಾಯು.

ವಾಹನ ಮಾಲಿನ್ಯವನ್ನು
ಕಡಿಮೆ ಮಾಡಬೇಕಿದೆ,
ಎಚ್ಚೆತ್ತುಕೋ, ಉಳಿಸು ನನ್ನ,
ಭೂಮಿ ತಾಯಿ ಹೇಳಿದೆ.

ಎಲ್ಲೆಂದರೆ ಅಲ್ಲಿ ಕಸವ
ಚೆಲ್ಲಬೇಡಿ ಜನಗಳೆ,
ಉದ್ಯಾನ ನಗರಿ ಅಂದವಿಡಲು
ಸಹಕರಿಸಿ ಪ್ರಜೆಗಳೆ.

ಗಿಡ ಮರಗಳ ಬೆಳೆಸಿ ನೀವು
ಹಸಿರುಕ್ರಾಂತಿ ತನ್ನಿರಿ,
ವಸುಂಧರೆಗೆ ತಂಪನೆರೆದು
ಸುಭಿಕ್ಷತೆಯ ಮೆರೆಸಿರಿ.

–ನಾಗರಾಜ ಅನಂತ್

ಚಿಂತನೆಗೊಂದು ಸಂಗತಿ

ಯುದ್ಧ

ಯಾವುದೇ ದೇಶದ ಸರ್ಕಾರ ತನ್ನ ಇಚ್ಛೆಗೆ ಅನುಗುಣವಾಗಿ ಮತ್ತು ರಾಜಕೀಯ ಸಂದರ್ಭಾನುಸಾರವಾಗಿ ಪರದೇಶದೊಂದಿಗೆ ಯುದ್ಧ ಮಾಡಲು ಏಕಪಕ್ಷೀಯಾವಾಗಿ ತೀರ್ಮಾನಿಸಬಹುದೇ? ಯುದ್ಧ ಸಂಭವಿಸಿದರೆ ಎರಡೂ ದೇಶಗಳಲ್ಲಿಯು ಮುಗ್ಧ ಜನರು ಸಾವು-ನೋವನ್ನು ಅನಭವಿಸಬೇಕಾಗುತ್ತದೆ. ಯುದ್ಧದ ಗೆಲುವು ಸರ್ಕಾರಕ್ಕೆ ವಿವಿಧ ಕಾರಣಗಳಿಂದ ಲಾಭದಾಯಕವಾಗ ಬಹುದು. ಆದರೆ ಜನ ಸಾಮಾನ್ಯರಿಗೆ ಸರ್ಕಾರದ ಆ ಲಾಭಗಳಿಂದ ನೇರವಾಗಿ ಪ್ರಯೋಜನವಾಗುವುದಿಲ್ಲ. ಅವಾಯಕರು ಅನುಭವಿಸಿದ ಸಾವು-ನೋವುಗಳು ಮತ್ತು ಆಸ್ತಿಪಾಸ್ತಿಯ ನಷ್ಟವನ್ನು ಸರ್ಕಾರ ಎಂದೂ ಭರಿಸಿ ಕೊಡಲಾರದು. ಆದ್ದರಿಂದ ಯುದ್ಧದ ತೀರ್ಮಾನದ ವಿಷಯದಲ್ಲಿ ಆಯಾ ದೇಶದ ನಾಗರೀಕರ ಸಮ್ಮತಿ ಅಥವಾ ಅಸಮ್ಮತಿಯ ಅಗತ್ಯವಿಲ್ಲವೆ? ಈ ಪ್ರಶ್ನೆ ಭಾರತ, ಅಮೇರಿಕ, ಮತ್ತು ಇಂಗ್ಲೆಂಡ್‌ನಂಥ ಪ್ರಜಾಪ್ರಭುತ್ವವಾದಿ ದೇಶಗಳ ಜನರಿಗೆ ಬಹುಮುಖ್ಯವಾಗುತ್ತದೆ. ಸ್ಥಾವರ ಮತ್ತು ಜಂಗಮಗಳೆಲ್ಲವನ್ನು ಅರೆಕ್ಷಣದಲ್ಲಿ ನಾಶಮಾಡುವಂತ ಭೀಕರ ಶಸ್ತ್ರಾಸ್ತ್ರಗಳು ಸರ್ಕಾರಗಳ ಬಳಿ ಇರುವುದರಿಂದ ಯುದ್ಧ ತೀರ್ಮಾನದ ವಿಷಯದಲ್ಲಿ ಸರ್ಕಾರಗಳಿಗೇ ಅಂತಿಮ ತೀರ್ಮಾನ ಕೊಡುವುದು ತರವಲ್ಲ. ಆಯಾ ದೇಶದಲ್ಲಿಯ ನಾಗರೀಕ ಸಮಾಜ ಎಚ್ಚೆತ್ತುಕೊಂಡು ದೇಶದ ಸರ್ಕಾರಗಳ ಯುದ್ಧ ತೀರ್ಮಾನದ ವಿಷಯದಲ್ಲಿ ಅಂಕುಶ ಉಪಯೋಗಿಸಬೇಕು. ಜಾಗತಿಕ ಮಟ್ಟದಲ್ಲಿ ಭೀಕರ ಅಶಾಂತಿ ತಾಂಡವವಾಡುತ್ತಿರುವಾಗ ಜಗತ್ತಿನ ಎಲ್ಲ ದೇಶಗಳಲ್ಲಿಯ ನಾಗರೀಕ ಸಮಾಜ ಒಟ್ಟಾರೆ ಯುದ್ಧದ ವಿರುದ್ಧ ದೃಢವಾದ ಧ್ವನಿ ಎತ್ತುವುದು ಇಂದಿನ ಯುಗಧರ್ಮವಾಗಿದೆ. ಸರ್ಕಾರವೆಂಬುದೆ ಹಿಂಸೆಯ ಮೊತ್ತ. ಅದು ಅಹಿಂಸೆಯ ಮೌಲ್ಯವನ್ನು ಸಮಾಜದಲ್ಲಿ ಬಿತ್ತಲಾರದು. ನಾಗರಿಕ ಸಮಾಜವೇ ಆ ಕೆಲಸವನ್ನು ಮಾಡಬೇಕು, ಅದು ಅದರ ಕರ್ತವ್ಯ ಕೂಡ. ●

ಭಾರತ-ಪಾಕ್ ಯುದ್ಧ ಕೂಡದು

– ಸುರೇಂದ್ರ ಕೌಲಗಿ

ಭಾರತ ಮತ್ತು ಪಾಕಿಸ್ತಾನ ಮಧ್ಯೆ ಯುದ್ಧ ಸಂಭವಿಸುವುದೇನೋ ಎಂಬ ಭೀತಿ ಭಾರತಿಯರನ್ನೂ, ಇತರ ದೇಶಗಳ ನಾಗರೀಕರನ್ನೂ ಕಾಡುತ್ತಿದೆ. ಇತ್ತೀಚೆಗೆ ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಪ್ರದೇಶದ ಒಳಗೆ ಭಾರತ ನುಗ್ಗಿ "ನಿರ್ದಿಷ್ಟ ದಾಳಿ" ನಡೆಸಿದ ಮೇಲಂತೂ ಯುದ್ಧದ ಕಾರ್ಮೋಡಗಳು ಸೇರುತ್ತಿರುವಂತೆ ಅನಿಸುತ್ತಿದೆ. ಪಾಕಿಸ್ತಾನ ಸೇಡು ತೀರಿಸಿಕೊಳ್ಳಲು ಹವಣಿಸುತ್ತಿರಬಹುದು ಎಂಬ ಗುಮಾನಿಯಿಂದಾಗಿ ಭಾರತ ತನ್ನ ಸೈನ್ಯ ಮತ್ತು ಯುದ್ಧ ಸಾಮಾಗ್ರಿಗಳನ್ನು ಸನ್ನದ್ಧವಾಗಿಟ್ಟುಕೊಂಡು ಕ್ಷಣಾರ್ಧದಲ್ಲಿ ಯುದ್ಧಕ್ಕೆ ಸಿದ್ಧಾವಾಗಿರುವಂತೆ ತಯಾರಿಮಾಡಿಕೊಂಡಿದೆ.

ಪಾಕಿಸ್ತಾನ ಭಾರತದ ಮೇಲೆ ಇದುವರೆಗೆ ನಾಲ್ಕು ಬಾರಿ ಯುದ್ಧ ಮಾಡಿದೆ. ೧೯೭೧ ರಲ್ಲಿ ನಡೆದ ಭಾರತ-ಪಾಕ್‌ಯುದ್ಧದಲ್ಲಿ ಪಾಕಿಸ್ತಾನ ಸೋತಾದ ಮೇಲೆ ಅದು ಒಳಗೊಳಗೆ ಯುದ್ಧದ ಸಿದ್ಧತೆಯನ್ನು ಮಾಡಿಕೊಳ್ಳುತ್ತಲೇ ಬಂದಿದೆ. ಈಗ ಅದರ ಬಳಿ ಅಣುಬಾಂಬಗಳಿವೆ. ಚೀನಾ ಮತ್ತು ರಷ್ಯಾದಿಂದ ಖರೀದಿಸಿದ ಅತ್ಯಾಧುನಿಕ ಯುದ್ಧವಿಮಾನಗಳಿವೆ. ಇದಲ್ಲದೆ ಪಾಕಿಸ್ತಾನದಲ್ಲಿರುವ ಸರ್ಕಾರದ ಮೇಲೆ ಸೈನ್ಯದ ಹಿಡಿತ ಇದೆ. ಅಲ್ಲಿಯ ಸರ್ಕಾರ ಚುನಾಯಿತ ಸರ್ಕಾರವಾಗಿದ್ದರೂ ಸೈನ್ಯದ ಮುಖ್ಯಸ್ಥರ ಮಾತೇ ಅಂತಿಮ. ಆದರೆ ಇದಕ್ಕೆ ವಿರುದ್ಧವಾಗಿ ಭಾರತದಲ್ಲಿ ಪ್ರಜಾಪ್ರಭುತ್ವ ಇದೆ. ಇಂಥ ಸನ್ನಿವೇಶದಲ್ಲಿ ಯುದ್ಧ ಮಾಡುವುದರ ಬಗ್ಗೆ ಭಾರತಕ್ಕಿಂತ ಪಾಕಿಸ್ತಾನ ಮೊದಲು ತೀರ್ಮಾನ ಕೈಗೊಳ್ಳುವ ಸಾಧ್ಯತೆ ಹೆಚ್ಚು.

ಭಾರತ-ಪಾಕ್ ಮಧ್ಯ ವಿವಾದಕ್ಕೆ ಮೂಲ ಕಾರಣವಾಗಿರುವ ಕಾಶ್ಮೀರ ಸಮಸ್ಯೆಯು ಕಳೆದ ಎಪ್ಪತ್ತು ವರ್ಷಗಳಿಂದ ಬಗೆಹರಿಯದೆ ಕುಳಿತಿದೆ. ಪಾಕಿಸ್ತಾನದ ಕೆಲ ಪ್ರಧಾನ ಮಂತ್ರಿಗಳು ಭಾರತದೊಂದಿಗೆ ನೂರು ವರ್ಷ ಯುದ್ಧಮಾಡಬೇಕಾಗಿ ಬಂದರೂ ಕಾಶ್ಮೀರವನ್ನು ಭಾರತಕ್ಕೆ ಬಿಟ್ಟುಕೊಡುವುದಿಲ್ಲವಾಗಿ ಹೇಳಿದ್ದಾರೆ. ಇದೇ ಮನೋಭಾವ ಪಾಕಿಸ್ತಾನದ ಇಂದಿನ ಆಡಳಿತಗಾರರಲ್ಲಿಯೂ ಇದೆ. ಪರಿಸ್ಥಿತಿ ಹೀಗಿರುವಾಗ ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಐದನೇ ಯುದ್ಧ ಸಂಭವಿಸಿದರೆ ಆಶ್ಚರ್ಯಪಡಬೇಕಾಗಿಲ್ಲ. ಎರಡೂ ದೇಶಗಳ ಬಳಿ ಅಣುಬಾಂಬಗಳು ಇರುವುದರಿಂದ ಯುದ್ಧ ಸಂಭವಿಸಿದಲ್ಲಿ ಗೆದ್ದವರು-ಸೋತವರು ಎಂಬ ಭೇದವೇ ಇರುವುದಿಲ್ಲ. ಯಾವುದನ್ನೇ ಆಗಲಿ ಸಂಭ್ರಮಿಸಲು ಯಾರೂ ಜೀವಂತವಾಗಿರುವುದಿಲ್ಲ! ಆದ್ದರಿಂದ ಈಗ ತುರ್ತಾಗಿ ಅಮೇರಿಕಾ, ರಷ್ಯ, ಇಂಗ್ಲೇಂಡ ಮತ್ತು ಚೀನಾದಂಥ ಪ್ರಮುಖ ದೇಶಗಳು ಸಂಯುಕ್ತ ರಾಷ್ಟ್ರಸಂಘದ ಮೂಲಕ ಭಾರತ-ಪಾಕ್ ಯುದ್ಧ ಸಂಭವಿಸದಂತೆ ಹಾಗೂ ಗಡಿ ನಿಯಂತ್ರಣ ರೇಖೆಯಲ್ಲಿ ಶಾಂತಿ ಇರುವಂತೆ ಮಾಡಬೇಕು.

ಅಂತರಾಷ್ಟ್ರೀಯ ಮಟ್ಟದ ಈ ಪ್ರಯತ್ನದೊಂದಿಗೆ ಎರಡೂ ದೇಶಗಳಲ್ಲಿರುವ ಅಮಾಯಕ ಜನರ ಪ್ರತಿನಿಧಿಗಳು ಸೇರಿ ಒಂದು ಒಕ್ಕೂಟ ಮಾಡಿಕೊಂಡು ಭಾರತ ಮತ್ತು ಪಾಕಿಸ್ತಾನದ ಪ್ರಧಾನಿಗಳನ್ನು ಪ್ರತ್ಯೇಕವಾಗಿ ಭೇಟಿಮಾಡಿ ಸಮಸ್ಯೆಯನ್ನು ಮಾತುಕತೆಯ ಮೂಲಕವೇ ಬಗೆಹರಿಸಿಕೊಳ್ಳಬೇಕೆಂದು ಒತ್ತಾಯ ಮಾಡಬೇಕು. ಸಾಧ್ಯವಾದರೆ ತಮ್ಮ ತಮ್ಮ ಸರ್ಕಾರಗಳ ವಿರುದ್ಧ ಸವಿನಯ ವಿರೋಧ ಅಥವಾ ಸತ್ಯಾಗ್ರಹವನ್ನು ಪ್ರಾರಂಭಿಸಬೇಕು. ಏಕೆಂದರೆ ಸಾಮಾನ್ಯವಾಗಿ ಯುದ್ಧ ಯೋಜನೆಗಳು ಮಾನವನ ಮನಸ್ಸಿನಲ್ಲಿ ಪ್ರಾರಂಭವಾಗುವುದರಿಂದ ಮನಪರಿವರ್ತನೆ ಬಹಳ ಮುಖ್ಯವಾಗುತ್ತದೆ. ಈ ದಿಸೆಯಲ್ಲಿ ಭಾರತ–ಪಾಕ್ ಪ್ರಧಾನಮಂತ್ರಿಗಳ ಮನಸ್ಸನ್ನು ಬದಲಾಯಿಸುವ ಕೆಲಸವನ್ನು ಆಯಾ ದೇಶಗಳಲ್ಲಿಯ ಶಾಂತಿಪ್ರಿಯ ಪ್ರಜೆಗಳೇ ಮಾಡಬೇಕಾಗುತ್ತದೆ. ಸಂಘರ್ಷಾತ್ಮಕ ಸನ್ನಿವೇಶದಲ್ಲಿಯೇ ಪ್ರಜೆಗಳಿಗೆ ಸತ್ಯ, ಅಹಿಂಸೆ, ಶಾಂತಿ ಮತ್ತು ಮೈತ್ರಿಯಂಥ ವಿಚಾರಗಳು ಅರ್ಥವಾಗುತ್ತವೆ. ಹಿಂಸೆಯ ಬದಲು ಅಹಿಂಸೆ, ಘರ್ಷಣೆಯ ಬದಲು ಮಾತುಕತೆ ಎಂಬ ಸೂತ್ರಗಳು ಅಗತ್ಯವೆನಿಸುತ್ತವೆ ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರಲು ಕಾಲವೂ ಪಕ್ವವಾಗಿರುತ್ತದೆ. ಭಾರತೀಯರಲ್ಲಿ ಅಹಿಂಸೆ ಒಂದು ಮೌಲ್ಯವಾಗಿಯೇ ಇದೆ. "ಭಾರತದ ಸ್ವಾತಂತ್ರ್ಯ ಎಂದೂ ಲೋಕಹಿತ ಕಂಟಕವಾಗಲಾರದೆಂದು" ಗಾಂಧೀಜಿ ಆಗಲೇ ಹೇಳಿದ್ದರು. ಇದೇ ಭಾವನೆಯನ್ನು ಇಂದಿನ ಪ್ರಧಾನಿ ವ್ಯಕ್ತಪಡಿಸಿದ್ದಾರೆ. ಭಾರತದ ನೀತಿ ಯುದ್ಧವಲ್ಲ, ಬುದ್ಧ ನಮ್ಮ ದಾರಿ ಎಂದು ಹೇಳಿ ಭಾರತ ಅಹಿಂಸಾ ಮಾರ್ಗದಲ್ಲಿ ಇಟ್ಟಿರುವ ನಂಬಿಕೆ ಧೃಡಪಡಿಸಿದ್ದಾರೆ. ಪಾಕಿಸ್ತಾನದಲ್ಲಿ ಇಸ್ಲಾಂ ಧರ್ಮದ ಸದ್ಭಾವನೆಗಳನ್ನು ಪ್ರತಿಪಾದಿಸುವ ಅನೇಕ ಧಾರ್ಮಿಕ ನಾಯಕರೂ ಮತ್ತು ಪ್ರಗತಿಪರ ಚಿಂತಕರೂ ಇದ್ದಾರೆ. ಅವರ ಅಣ್ವಸ್ತ್ರಗಳ ಉಪಯೋಗವಾಗದಂತೆ ನೋಡಿಕೊಳ್ಳಬೇಕು. (ಸಂಯುಕ್ತ ರಾಷ್ಟ್ರಸಂಘ ಮಾಡುವ ಶಾಂತಿ ಸ್ಥಾಪನೆಯ ಕೆಲಸದೊಂದಿಗೆ ಎರಡೂ ದೇಶಗಳ ಈ ನಾಗರೀಕ ಸಮಾಜದ ಒಕ್ಕೂಟ ಕೈಜೋಡಿಸಬೇಕು). ಶಾಂತಿ ಸ್ಥಾಪನೆಯಾದ ಮೇಲೆ ಕಾಶ್ಮೀರದ ವಿಷಯವಾಗಿ ದುಂಡುಮೇಜಿನ ಪರಿಷತ್ತು ನಡೆಯಬೇಕು. ಎರಡೂ ದೇಶಗಳು ಕಾಶ್ಮೀರ ರಾಜ್ಯದ ಹಿತವನ್ನೆ ಬಯಸುತ್ತಿರುವುದಾದರೆ ಆ ರಾಜ್ಯ ಪುನಃ ಒಂದುಗೂಡುವಂತೆ ಮಾಡಬೇಕು ಮತ್ತು ಅದು ಸ್ವಾಯತ್ತತೆ ಪಡೆಯಬೇಕು. ಎರಡೂ ದೇಶಗಳ ನೆರವಿನೊಂದಿಗೆ ಉನ್ನತಿಯನ್ನು ಸಾಧಿಸಬೇಕೆಂಬಿತ್ಯಾದಿ ಸಲಹೆಗಳನ್ನು ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಯೋಚಿಸಬಹುದು.

ಎರಡೂ ದೇಶಗಳಲ್ಲಿಯ ಸಮಾನಮನಸ್ಕ ಪ್ರತಿನಿಧಿಗಳ ಒಕ್ಕೂಟ ಸಾಕಾರಗೊಳ್ಳುವುದಕ್ಕೆ ಎರಡೂ ದೇಶಗಳ ಸರ್ಕಾರಗಳು ಸೂಕ್ತ ವಾತಾವರಣವನ್ನು ಕಲ್ಪಿಸಿ ಕೊಡಬೇಕು. ಈ ವಿಷಯದಲ್ಲಿ ಮಾಧ್ಯಮಗಳ ಪಾತ್ರ ಹಿರಿದೂ ಮತ್ತು ಜವಾಬ್ದಾರಿಯುತವಾದದ್ದೂ ಆಗಿದೆ. ಮಾಧ್ಯಮ ಎರಡೂ ದೇಶಗಳ ನಾಗರಿಕರ ಸಂಪರ್ಕ ಸೇತುವೆಯಾಗಿ ಕೆಲಸಮಾಡಬೇಕು. ಎರಡೂ ದೇಶಗಳಲ್ಲಿಯ ವಿಚಾರವಂತ

ಲೇಖಕರು ಯುದ್ಧ ನಿರಸನದ ಮಾತನ್ನೇ ಬರೆಯಬೇಕು, ಶಾಂತಿ ಮತ್ತು ಅಹಿಂಸೆಯ ವಿಚಾರವನ್ನೇ ಒತ್ತಿ ಹೇಳುವುದರ ಮೂಲಕ ಶಾಂತಿಗಾಗಿ ಜನಮಾನಸವನ್ನು ಸಿದ್ಧಗೊಳಿಸಬೇಕು.

ಭಾರತ ಮತ್ತು ಪಾಕಿಸ್ತಾನದ ಮಧ್ಯ ಜಗಳದ ವಿಷಯವಾದ ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಗಮನಿಸಬೇಕಾದ ಉಪಯುಕ್ತ ಅಂಶಗಳಿವೆ.

ಮೊದಲನೆಯದು ೧೯೭೦ ರಲ್ಲಿ ಜುಲ್ಫಿಕರ್‌ಅಲಿ ಭುಟ್ಟೊ ಮತ್ತು ಇಂದಿರಾ ಗಾಂಧೀ ಅವರ ಮಧ್ಯೆ ಆದ ಸಿಮ್ಲಾ ಒಪ್ಪಂದ: ಈ ಒಪ್ಪಂದದ ಪ್ರಕಾರ ಕಾಶ್ಮೀರ ಒಂದು ದ್ವಿಪಕ್ಷೀಯ ಸಮಸ್ಯೆ. ಅದನ್ನು ಮೂರನೆಯವರ ಮಧ್ಯಸ್ಥಿಕೆ ಇಲ್ಲದೆ ಎರಡೂ ದೇಶಗಳು ಪರಸ್ಪರ ಮಾತುಕತೆಯ ಮೂಲಕವೇ ಬಗೆಹರಿಸಿಕೊಳ್ಳಬೇಕೆಂದು ಅದರಲ್ಲಿ ತಿಳಿಸಲಾಗಿದೆ. ಈ ಒಪ್ಪಂದದ ಪ್ರಕಾರ ಎರಡೂ ದೇಶಗಳು ತೊಡಗಿರುವ ಈಗಿನ ಘರ್ಷಣೆಗೆ ಅವಕಾಶವೇ ಇಲ್ಲ.

ಎರಡನೇಯದು ಪಾಕಿಸ್ತಾನ ಸಂಸ್ಥಾಪಕ ಮೊಹಮ್ಮದ್‌ಆಲಿ ಜಿನ್ನಾ ಎರಡೂ ದೇಶಗಳು ಸ್ವತಂತ್ರವಾದ ನಂತರ ಅವು ಅಮೇರಿಕಾ ಮತ್ತು ಕೆನಡದಂತೆ ಇರುವವು ಮತ್ತು ಧರ್ಮವನ್ನು ಆಡಳಿತದಲ್ಲಿ ಸೇರಿಸಿರುವುದಿಲ್ಲವೆಂದು ಆಶಿಸಿದ್ದರು. ಜಿನ್ನಾರವರ ಈ ಮಾತನ್ನು ಪಾಕಿಸ್ತಾನದ ಇಂದಿನ ಸರ್ಕಾರಕ್ಕೆ ತಿಳಿಸಬೇಕು.

ಇವೆಲ್ಲಕ್ಕಿಂತ ಹೆಚ್ಚು ಮುಖ್ಯವಾದ ಮೂರನೇ ಸಂಗತಿ ಇದೆ. ದೇಶದ ವಿಭಜನೆ ನಂತರ ಭಾರತ-ಪಾಕ್ ಗಡಿಯುದ್ದಕ್ಕೂ ಹಾಗು ಬಂಗಾಳ, ಬಿಹಾರ, ಮತ್ತು ದಿಲ್ಲಿ ಮುಂತಾದ ಸ್ಥಳಗಳಲ್ಲಿ ಆದ ಕೋಮು ಗಲಭೆಗಳನ್ನು ನಿಲ್ಲಿಸುವುದಕ್ಕಾಗಿ ಮಹಾತ್ಮ ಗಾಂಧೀಜಿಯವರು ೧೯೪೮ ಜನವರಿ ೧೩ ರಿಂದ ೧೮ ವರೆಗೆ ಐದು ದಿನಗಳ ಉಪವಾಸವನ್ನು ದಿಲ್ಲಿಯಲ್ಲಿ ಮಾಡಿದಾಗ ಹಿಂದೂ, ಮುಸ್ಲಿಂ, ಸಿಖ್ಖ, ಮತ್ತು ಕ್ರೀಶ್ಚಿಯನ್ ಧರ್ಮೀಯರು ಕೋಮು ಸೌಹಾರ್ದಕ್ಕೆ ಒಪ್ಪಿ ರುಜು ಮಾಡಿದ್ದರು. ಭವಿಷ್ಯದಲ್ಲಿ ಕೋಮು ಗಲಭೆಯಾಗುವುದಿಲ್ಲವೆಂದೂ ಭರವಸೆಕೊಟ್ಟರು. ಶಾಂತಿ ಸಭೆಯಲ್ಲಿ ಪಾಕಿಸ್ತಾನದ ಅಂದಿನ ರಾಜದೂತರು ಸಹ ಇದ್ದರು. ಈ ಶಾಂತಿ ಒಪ್ಪಂದದಂತೆ ಹಿಂದೂ ಮತ್ತು ಮುಸ್ಲಿಂರು ಸಹೋದರರಂತೆ ಶಾಂತಿಯಿಂದ ತಮ್ಮ ತಮ್ಮ ಪ್ರದೇಶದಲ್ಲಿ ಸಹಬಾಳ್ವೆ ನಡೆಸಬೇಕು. ಯುದ್ಧ ಕೂಡವೆಂದು ಎರಡೂ ದೇಶಗಳಲ್ಲಿಯ ನಾಗರಿಕ ಸಮಾಜ ಧೃಡವಾದ ಧ್ವನಿ ಎತ್ತಬೇಕು.

ಮೇಲ್ಕಾಣಿಸಿದ ಎಲ್ಲ ಐತಿಹಾಸಿಕ ಸಂಗತಿಗಳನ್ನು ನಾಗರೀಕರ ಒಕ್ಕೂಟ ತಮ್ಮ ದೇಶಗಳ ಸರ್ಕಾರಕ್ಕೆ ಮತ್ತು ಜನತೆಗೆ ತಿಳಿಸಿ ಅವು ಜಾರಿಯಾಗುವಂತೆ ಮಾಡಬೇಕು. ಇಂಥ ಎಲ್ಲ ಕ್ರಮಗಳನ್ನು ಶ್ರದ್ಧೆ ಮತ್ತು ಬದ್ಧತೆಯಿಂದ ನಾಗರಿಕರ ಒಕ್ಕೂಟ ಮಾಡಿದ್ದೇಯಾದರೆ ಭಾರತದದ ಉಪಖಂಡದಲ್ಲಿ ಶಾಂತಿ ಖಂಡಿತ ನೆಲೆಸುವುದು. ಭಾರತ ಪಾಕಿಸ್ತಾನ ಮಧ್ಯೆ ಉಂಟಾಗಬಹುದಾದ ಭೀಕರ ಸ್ವರೂಪದ ಯುದ್ಧವು ತಪ್ಪುವುದು.

●

ಬಿಸಾಡಲ್ಪಡುವ ಸಂಸ್ಕೃತಿಯ ಸಿಕ್ಕಿನಲ್ಲಿ ಟೆಕ್ಕಿಗಳು!

ರೈತರ ಆತ್ಮಹತ್ಯೆ ಸರಣಿಯನಂತರ ಟೆಕ್ಕಿಗಳ ಆತ್ಮಹತ್ಯೆ ಸರಣಿ ಪ್ರಾರಂಭವಾಗಿದೆ.

– ಸದಾನಂದ ಆರ್

ಕೊಳ್ಳುಬಾಕ ಸಂಸ್ಕೃತಿ ನಮ್ಮನ್ನು ಆವರಿಸಿ ದಶಕಗಳು ಉರುಳಿವೆ. ಜೀವಕ್ಕಿಂತ ವಸ್ತುವಿಗೆ ಬೆಲೆಯಿರುವ ಇಲ್ಲಿ, ಮಾನವೀಯತೆ ಎನ್ನುವುದು ಅಪ್ರಸ್ತುತ. ೧೯೯೦ರಿಂದ ಭಾರತದ ಯಾತ್ರೆ ಈ ನಿಟ್ಟಿನಲ್ಲಿ ಸಾಗಿದ್ದು, ಇಪ್ಪತ್ತೈದು ವರ್ಷಗಳ ಪ್ರಯಾಣದ ನಂತರ ಇದರ ಕರಾಳ ಮುಖದ ದರ್ಶನವಾಗುತ್ತಿದ್ದು, ಅನೇಕರು ಬೆದರತೊಡಗಿದ್ದಾರೆ. ರೈತರು ೧೯೯೦ರ ದಶಕಗಳಲ್ಲಿ ಬಲಿಯಾಗಿದ್ದು ಈಗ ಇತಿಹಾಸ ಸೇರಿದೆ. ಈ ಸಾಲಿಗೆ ಹೊಸ ಸೇರ್ಪಡೆ ಟೆಕ್ಕಿಗಳು!

ದೇಶದ ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪನಿಯೊಂದು ಹತ್ತು ಹದಿನೈದು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದ ತನ್ನ ಉದ್ಯೋಗಿಗಳನ್ನು ಮನೆಗೆ ಕಳುಹಿಸಲು ಆರಂಭಿಸಿದೆ. ಕಂಪನಿಯ ವ್ಯವಹಾರಿಕ ಅಗತ್ಯಗಳ ಕಾರಣದಿಂದ ತನ್ನ ಗಾತ್ರ ಕುಗ್ಗಿಸಿಕೊಳ್ಳುವ ಪ್ರಕ್ರಿಯೆಯ ಭಾಗವಾಗಿ ಉದ್ಯೋಗಿಗಳ ಸಂಖ್ಯೆಯನ್ನು ಕಡಿಮೆಗೊಳಿಸಲಾಗುತ್ತಿದೆನ್ನುವುದು ಕಂಪನಿಯ ವಾದ. "ತನ್ನ ಆರ್ಥಿಕ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಇದು ಅನಿವಾರ್ಯ, ಹಾಗಾಗಿ ಅನುತ್ಪಾದಕ ಸಿಬ್ಬಂಧಿಯನ್ನು ಮಾತ್ರ ಹೊರಕಳುಹಿಸಲಾಗಿದೆ" ಎಂದು ಎನ್ನುತ್ತಿದೆ ಕಂಪನಿ. ಒಟ್ಟಾರೆ ೫% ರಿಂದ ೧೦% ರಷ್ಟು ಜನರನ್ನು ಈಗಾಗಲೇ ಹೊರಕಳುಹಿಸಲಾಗಿದೆ. ಕೆಲಸ ಕಳೆದುಕೊಂಡಿರುವವರ ಸ್ಥಿತಿ ಶೋಚನೀಯವಾಗಿದೆ. ಜಾಗತೀಕರಣದ ಪ್ರತಿಫಲವನ್ನು ಇದುವರೆಗೆ ಅನುಭವಿಸಿದ್ದವರಿಗೆ ಅದರ ಇನ್ನೊಂದು ಮುಖವನ್ನು ಕಂಡು ಗಾಭರಿಯಾಗಿದೆ. ಹದಿನೈದು ವರ್ಷ ದುಡಿದ ಕಂಪನಿ ಏಕಾಏಕಿ ನಿಮ್ಮ ಅಗತ್ಯವಿಲ್ಲ ಎಂದಾಗ, ಮುಂದೇನು ಎನ್ನುವಂತಾಗಿದೆ. ಮಧ್ಯಮ ಹಂತದ ಮ್ಯಾನೇಜರ್ ಹುದ್ದೆಗಳಲ್ಲಿ ಇದ್ದ ಇವರು ವಿಚಿತ್ರ ಸ್ಥಿತಿಯಲ್ಲಿದ್ದಾರೆ. ಒಂದೆಡೆ ಅನುತ್ಪಾದಕರೆಂದಾಗಿರುವ ಕಾರಣ ಅನ್ಯ ಕಂಪನಿಗಳಲ್ಲಿ ಕೆಲಸ ಗಿಟ್ಟಿಸುವುದು ಕಷ್ಟಸಾಧ್ಯವಾದರೆ, ಇನ್ನೊಂದೆಡೆ ಓದುತ್ತಿರುವ ಮಕ್ಕಳ ವೆಚ್ಚ, ಮನೆಯ ನಿರ್ವಹಣೆ, ಜೊತೆಗೆ ಗೃಹ ಸಾಲ ಇತ್ಯಾದಿಗಳನ್ನು ತೂಗಿಸುವ ತುರ್ತು. ಕೋರ್ಟಿನ

ಮೆಟ್ಟಿಲೇರಿರುವ ಅನೇಕ ಉದ್ಯೋಗಿಗಳಿಗೆ ನ್ಯಾಯ ಸಿಗುವುದು ಅಷ್ಟು ಸುಲಭವಲ್ಲ ಎನ್ನುವುದು ತಜ್ಞರ ಅಭಿಪ್ರಾಯ. ಏಕೆಂದರೆ ಹೊಸ ಆರ್ಥಿಕ ನೀತಿಯೊಂದಿಗೆ ಜಾರಿಗೆ ಬಂದ ಅನೇಕ ಕಾರ್ಮಿಕ ಕಾನೂನುಗಳು ಕಂಪನಿಗಳ ಪರವಾಗಿವೆಯೇ ಇದೆಯೆ ಹೊರತು ಉದ್ಯೋಗಿಗಳ ಪರವಾಗಿ ಅಲ್ಲ.

ಇವರ ಸ್ಥಿತಿಗತಿ ಕುರಿತು ಯೋಚಿಸುತ್ತಿದ್ದಾಗ, ಬಹಳ ಹಿಂದೆ ಪತ್ರಿಕೆಯಲ್ಲಿ ಓದಿದ್ದ ಸುದ್ದಿಯೊಂದು ನೆನಪಾಯಿತು. ಅಮೇರಿಕಾ ದೇಶ ಊರಿನಲ್ಲಿ ನಡೆದ ಘಟನೆಯದು. ಓರ್ವ ಮಹಿಳೆ ಕಾರಿನಲ್ಲಿ ಏ.ಸಿ. ಆನ್ ಮಾಡಿ ನಿದ್ದೆ ಮಾಡುತ್ತಿದ್ದಾಗ ವಿಷದ ಗಾಳಿ ಸೇವಿಸಿ ಮರಣಹೊಂದಿದಳು. ಪೋಲೀಸರ ಪ್ರಕಾರ ಆಕೆ ದಿನಕ್ಕೆ ಮೂರು ಪಾಳಿಗಳಲ್ಲಿ ಕೆಲಸ ಮಾಡುತ್ತಿದ್ದರಿಂದ ಕಾರಿನಲ್ಲಿ ನಿದ್ದೆ ಮಾಡುವ ಅಭ್ಯಾಸವಿತ್ತು. ಹೀಗೆ ಏ.ಸಿ ಆನ್ ಮಾಡಿ ನಿದ್ರಿಸುತ್ತಿದ್ದಾಗ ಅದರಿಂದ ವಿಷ ಗಾಳಿ ಹೊರಬಂದ ಕಾರಣ ನಿದ್ರೆಯಲ್ಲೇ ಆಕೆ ಚಿರನಿದ್ರೆಗೆ ಜಾರಿದ್ದಳು. ಒಂದಿಷ್ಟು ಹಣ ಸೇರಿಸಿಕೊಂಡು ಮದುವೆಯಾಗುವ ಉದ್ದೇಶದಿಂದ ಅವಳು ಕೆಲಸ ಮಾಡುತ್ತಿದ್ದಳೆಂದು ಆಕೆಯನ್ನು ಮದುವೆಯಾಗಬೇಕೆಂದಿದ್ದವ ಹೇಳಿದ್ದನೆಂದು ವರದಿಯಲ್ಲಿ ಇತ್ತು. ಇದು ಓರ್ವ ಮಹಿಳೆಯ ಕಥೆಯಾಗಿರದೆ, ಅಲ್ಲಿನ ಶ್ರಮಿಕ ವರ್ಗದ ಕಥೆಯೆನ್ನುವುದನ್ನು ಅನೇಕ ಅಧ್ಯಯನಗಳು ಹೇಳುತ್ತಿವೆ. ಜಾಗತೀಕರಣದ ಜಾಗಟೆ ಬಾರಿಸುತ್ತಾ ಮುಕ್ತ ಆರ್ಥಿಕ ವ್ಯವಸ್ಥೆಯ ರಾಯಭಾರಿಯಾಗಿರುವ ಅಮೇರಿಕಾ ದೇಶದ ಪ್ರಜೆಗಳ ಸ್ಥಿತಿಯಿದು.

ಮುಕ್ತ ಆರ್ಥಿಕತೆಯ ಪುಜಾರಿಯಾದ ಅಮೇರಿಕಾದಲ್ಲಿ ಹೆರಿಗೆ ಮುಗಿಸಿ ಮರುದಿನವೇ ನೀವು ಕೆಲಸಕ್ಕೆ ಹಾಜರಾದರೆ ಕ್ಷೇಮ. ಇಲ್ಲದಿದ್ದಲ್ಲಿ ನಿಮ್ಮ ಕೆಲಸ ಉಳಿಯುವುದಿಲ್ಲ. ಒಂದು ಅಧ್ಯಯನದ ಪ್ರಕಾರ ಸಿಜೇರಿಯನ್ ಮೂಲಕ ಹೆರಿಗೆಯಾದ ಮಹಿಳೆಯರು ಹತ್ತು ದಿನಗಳೊಳಗೆ ಕೆಲಸಕ್ಕೆ ಹಾಜರಾಗುವುದು ಇಲ್ಲಿ ಸಾಮಾನ್ಯ! ಈ ವಿಷಯದಲ್ಲಿ ಯಾವುದೇ ಸ್ಪಷ್ಟ ಕಾನೂನು ಈ ದೇಶದಲ್ಲಿ ಇಲ್ಲ! ವಿಶ್ವಕ್ಕೆ ಮಾನವ ಹಕ್ಕುಗಳ ಬಗ್ಗೆ ಪಾಠ ಹೇಳುವ ಅಮೇರಿಕಾದಲ್ಲಿ ಈಗ ಕೆಲವರು 'ಅಮೇರಿಕಾದ ತಾಯಂದಿರನ್ನು ಉಳಿಸಿ, ತನ್ಮೂಲಕ ಭವಿಷ್ಯದ ಅಮೇರಿಕಾವನ್ನು ಉಳಿಸಿ' ಆಂದೋಲನದಲ್ಲಿ ತೊಡಗಿದ್ದಾರೆ. ತಾಯಿಯ ಸಂಪರ್ಕವಿಲ್ಲದ ಮಗು ಅನೋರೋಗ್ಯಕ್ಕೆ ತುರ್ತಾಗಿ ಅನಾರೋಗ್ಯ ಅಮೇರಿಕಾದ ಸೃಷ್ಟಿಯಾಗುತ್ತದೆಂಬ ಆತಂಕ ಇವರದು. ಆದರೆ ಇದನ್ನು ಕೇಳಿಸಿಕೊಳ್ಳಲು ಸರ್ಕಾರವಾಗಲೀ ಕಂಪನಿಗಳಾಗಲೀ ತಯಾರಿಲ್ಲ.

ಇನ್ನು ಭಾರತದ ಸರ್ಕಾರಿ ಉದ್ಯೋಗಿಗಳ ಪಾಡು ಹೀಗೆಯೇ. ಒಮ್ಮೆ ಕೆಲಸಕ್ಕೆ ಸೇರಿದರೆ ಸಾಯುವವರೆಗೂ ಸಂಬಳ .ಎನ್ನುವುದು ಸರ್ಕಾರಿ

ಕೆಲಸಕ್ಕಿರುವ ದೊಡ್ಡ ಆಕರ್ಷಣೆ. ೨೦೦೬ರಿಂದ ಸರ್ಕಾರಿ ಉದ್ಯೋಗಕ್ಕೆ ಸೇರಿದವರಿಗೆ ಯಾವುದೇ ಪೆನಶನ್ ಇಲ್ಲ. ನ್ಯೂ ಪೆನಶನ್ ಯೋಜನೆಯಡಿ ಶೇ ೧೦ರಷ್ಟನ್ನು ಉದ್ಯೋಗಿಯ ಸಂಬಳದಿಂದ ಪಡೆದು, ಅದಕ್ಕೆ ಅಷ್ಟೆ ಹಣವನ್ನು ಸರ್ಕಾರ ನೀಡಿ ಒಂದು ಫಂಡ್‌ನಲ್ಲಿ ಇಡಲಾಗುತ್ತದೆ. ಈ ಹಣವನ್ನು ಮಾರುಕಟ್ಟೆಯಲ್ಲಿ ತೊಡಗಿಸಿ ಬಂದ ಲಾಭಾಂಶವನ್ನು ಪೆನಶನ್ ರೂಪದಲ್ಲಿ ನೀಡಲಾಗುತ್ತದೆ. ಯಾವುದೇ ನಿರ್ದಿಷ್ಟ ಹಣದ ಖಾತ್ರಿಯಿರುವುದಿಲ್ಲ. ಮಾರುಕಟ್ಟೆಯಾಧಾರಿತ ವ್ಯವಸ್ಥೆಯಿದು. ನಮ್ಮಿಂದ ಚುನಾಯಿತರಾದ ಜನಪ್ರತಿನಿಧಿಗಳು ಮಾತ್ರ ಸದ್ಯಕ್ಕೆ ಪೆನ್‌ಶನ್‌ಗೆ ಅರ್ಹರು. ಉಳಿದವರಿಗೆ ನ್ಯೂ ಪೆನಶನ್ ಯೋಜನೆಯೇ ಗಟ್ಟಿ. ಹೀಗೆ ೬೦ ದಾಟಿದ ನಂತರ ನಿರ್ದಿಷ್ಟ ಆದಾಯವಿಲ್ಲದೆ ಬದುಕುವ ಪರಿಸ್ಥಿತಿ. ಉಸಿರುವವರೆಗೂ ದುಡಿಯುವ ಮತ್ತು ಯಾವುದೇ ನಿರ್ದಿಷ್ಟ ಆದಾಯದ ಮೂಲಗಳಿಲ್ಲದೆ ಇರುವ ಹೊಸ ಸ್ಥಿತಿಗೆ ಸರ್ಕಾರಿ ನೌಕರರು ಹೊಂದಿಕೊಳ್ಳಬೇಕಿದೆ. ನಿಗದಿತ ಆದಾಯವಿರುವ ಗುಂಪಿನ ಸ್ಥಿತಿಯೇ ಹೀಗಿದೆ ಎಂದ ಮೇಲೆ ರೈತರೂ ಸೇರಿದಂತೆ ಇತರರ ಪಾಡೇನೆಂದು ಊಹಿಸುವುದು ಸುಲಭ.

ಮನುಷ್ಯರು ಕೇವಲ ವಸ್ತುಗಳಾಗಿ ಕಾಣುವುದು ಆಧುನಿಕ ಅರ್ಥವ್ಯವಸ್ಥೆಯ ಗುಣ. ಆತ್ಮ ಮತ್ತು ಸತ್ಯ ಶಕ್ತಿಗಳು ಮನುಷ್ಯನ ಮಾರ್ಗದರ್ಶಕರಾಗಬೇಕೆಂದ ಗಾಂಧೀಜಿಯವರ ಮಾತುಗಳು ನೆನಪಾಗುತ್ತವೆ. ಆತ್ಮವೇ ಇಲ್ಲದ ಜೀವಿಗಳ ಸೃಷ್ಟಿಯಲ್ಲಿ ದೇಶವಾಗಿ ನಾವು ತೊಡಗಿಕೊಂಡಿದ್ದೇವೆ. ವಿಶ್ವದ ನಂಬರ್ ಒನ್ ದೇಶವಾಗಬೇಕೆಂದು ಹೊರಟಿರುವ ಇಂದಿನ ಭಾರತ, ಒಮ್ಮೆ ಗಾಂಧೀಜಿ ಕನಸಿದ್ದ ಭಾರತವನ್ನು ಗಂಭೀರವಾಗಿ ಅವಲೋಕಿಸಿದರೆ ಸಾಕು ಎಂತಹ ಅಪಾಯಕಾರಿ ದಾರಿಯಲ್ಲಿ ನಡೆದ್ದಿದ್ದೇವೆ ಎನ್ನುವುದರ ಅರಿವಾಗುತ್ತದೆ.

ಡಾ|| ಮತ್ತೂರು ಕೃಷ್ಣಮೂರ್ತಿ ಗೌರವ ಪ್ರಶಸ್ತಿ ವಿಜೇತೆ ಶ್ರೀಮತಿ ರುಕ್ಮಿಣಿ ಕೃಷ್ಣಸ್ವಾಮಿ ಅವರು ಮಿದುಳಿನ ಪಾರ್ಶ್ವವಾಯುನಿಂದಾಗಿ ತೊಂದರೆಗೊಳಗಾಗಿರುವ ಮಕ್ಕಳ ಸೇವೆಗಾಗಿ ಕಳೆದ ೩೩ ವರ್ಷಗಳಿಂದ ಸೇವೆ ಮಾಡುತ್ತಿರುವ ರುಕ್ಮಿಣಿ ಕೃಷ್ಣಸ್ವಾಮಿ ಅವರಿಗೆ ಇತ್ತೀಚಿಗೆ ಮೈಸೂರಿನಲ್ಲಿ ಮತ್ತೂರು ಕೃಷ್ಣಮೂರ್ತಿ ಸೇವಾ ಪ್ರಶಸ್ತಿಯನ್ನು ಕೊಟ್ಟು ಗೌರವಿಸಲಾಗಿತು. ಪ್ರಶಸ್ತಿಯನ್ನು ಕನ್ನಡದ ಹಿರಿಯ ವಿದ್ವಾಂಸರು ಮತ್ತು ಸಂಶೋಧಕರೂ ಆದ ಡಾ|| ಟಿ.ವಿ.ವೆಂಕಟಾಚಲಶಸ್ತ್ರೀಯವರು ಪ್ರಶಸ್ತಿ ಪ್ರಧಾನ ಮಾಡಿದರು.

ಕಾವೇರಿ ಚಳುವಳಿ ಹಾಗೂ ಕನ್ನಡಕುಲ ಪ್ರಜ್ಞೆ

–ಡಿ.ಎಸ್. ನಾಗಭೂಷಣ

(ಇದು ಕಾವೇರಿ ನ್ಯಾಯಾಧಿಕರಣ ತನ್ನ ಐತೀರ್ಪನ್ನು ಪ್ರಕಟಿಸಿದ ಸಂದರ್ಭದಲ್ಲಿ ಕರ್ನಾಟಕದಲ್ಲಿ ಉಂಟಾದ ಗಲಭೆಗಳ ಹಿನ್ನೆಲೆಯಲ್ಲಿ– ೨೦೦೭ರ ಫೆಬ್ರುವರಿಯಲ್ಲಿ– ಬರೆದುದು–ಲೇ)

ಕಾವೇರಿ ನ್ಯಾಯಾಧಿಕರಣದ ತೀರ್ಪು ಪ್ರಕಟವಾಗಿ ಹದಿನೈದು–ಇಪ್ಪತ್ತು ದಿನಗಳಾಗುತ್ತಾ ಬಂದಿದ್ದರೂ, ಅಂದು ರಾಜ್ಯಾದ್ಯಂತ, ವಿಶೇಷವಾಗಿ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಆರಂಭವಾದ ಪ್ರತಿಭಟನೆ–ಮುಷ್ಕರಗಳು ಇನ್ನೂ ನಿಂತಿಲ್ಲ. ಕಾರಣ, ಜನತೆಯ ಪ್ರತಿನಿಧಿಯಾದ ಸರ್ಕಾರ, ತೀರ್ಪಿನ ಬಗ್ಗೆ ಬಾಯೇ ಬಿಟ್ಟಿಲ್ಲದಿರುವುದು! ಸಾವಿರ ಪುಟಗಳ ತೀರ್ಪು ಅದರ ಬಾಯನ್ನು ಕಟ್ಟಿ ಹಾಕಿಬಿಟ್ಟಿದೆ – ಸರ್ಕಾರದ ಹೊರತಾಗಿ ಮಿಕ್ಕೆಲ್ಲರೂ 'ಅನ್ಯಾಯ! ಅನ್ಯಾಯ!' ಎಂದು ಕೂಗುತ್ತಿದ್ದರೂ! ನ್ಯಾಯವೋ, ಅನ್ಯಾಯವೋ ವಿವರವಾಗಿ ನೋಡಿ ತೀರ್ಮಾನಿಸೋಣ; ಅನ್ಯಾಯವಾಗಿದ್ದರೆ ನ್ಯಾಯಕ್ಕಾಗಿ ಒಟ್ಟಿಗೆ ಹೋರಾಡೋಣ, ಅಲ್ಲಿಯವರೆಗೆ ವೃಥಾ ಪ್ರತಿಭಟನೆ ಬೇಡ ಎಂದು ಹೇಳುವ ಆತ್ಮವಿಶ್ವಾಸವೂ ಸರ್ಕಾರಕ್ಕಿಲ್ಲವಾಗಿದೆ. ಹೀಗಾಗಿ ವೃತ್ತಿಪರ ಚಳುವಳಿಕಾರರು ಮತ್ತು ಆತಂಕಕ್ಕೊಳಗಾಗಿರುವ ರೈತರ ಜೊತೆಗೆ ಹೆಂಗಸರು–ಮಕ್ಕಳು, ಸಾಹಿತಿಗಳು, ಮಠಾಧಿಶರು, ಸಿನಿಮಾದವರು, ವಿದ್ಯಾರ್ಥಿಗಳು, ವಕೀಲರು, ಐ.ಟಿ. ಉದ್ಯೋಗಿಗಳು, ಲೈಂಗಿಕ ಕಾರ್ಯಕರ್ತರು, ಹಿಜಡಾಗಳು ಹೀಗೆ ಎಲ್ಲರೂ ಪ್ರತ್ಯೇಕ ಪ್ರತ್ಯೇಕವಾಗಿ ಬೀದಿಗಳಲ್ಲಿ ಪ್ರತಿಭಟನೆಗಿಳಿದಿದ್ದಾರೆ.

ರಸ್ತೆ ತಡೆ, ರೈಲು ತಡೆ, ತಮಿಳು ಟಿವಿ ವಾಹಿನಿಗಳ ತಡೆ, ತಮಿಳು ಪತ್ರಿಕೆಗಳ ದಹನ, ಕೇಂದ್ರ ಸರ್ಕಾರೀ ಕಛೇರಿಗಳ ಮುತ್ತಿಗೆ ಮುಂತಾದ ಸಲ್ಲದ ಕ್ರಮಗಳಿಂದ ಹಿಡಿದು; ರಕ್ತ ತರ್ಪಣ, ರಕ್ತಪತ್ರ, ಉರುಳು ಸೇವೆ, ನಡುರಸ್ತೆಯಲ್ಲಿ ಅಡುಗೆ, ಆರ್ಕೆಸ್ಟ್ರಾ, ಸಚಿವ ಸ್ಥಾನಕ್ಕೆ ರಾಜೀನಾಮೆ, ಗೊಮ್ಮಟನಿಗೆ ಕಾವೇರಿ ಅಭಿಷೇಕ ಮುಂತಾದ ಒಲ್ಲದ ಕ್ರಮಗಳವರೆಗೆ ಹರಡಿದ ವೈವಿಧ್ಯಮಯ ಭಾವಭಂಗಿಗಳಲ್ಲಿ ವ್ಯಕ್ತವಾಗುತ್ತಿರುವ ಈ ಪ್ರತಿಭಟನೆ, ಕನ್ನಡ ಟಿವಿ ವಾಹಿನಿಗಳಲ್ಲಿ ಮತ್ತು ಕನ್ನಡ ಪತ್ರಿಕೆಗಳಲ್ಲಿ ಪ್ರತಿದಿನ ಪ್ರಮುಖ ಸುದ್ದಿಯಾಗಿ ರಾರಾಜಿಸುತ್ತಿದೆ.

ಇದರಿಂದಾಗಿ ಇಡೀ ರಾಜ್ಯವೇ ಒಂದಾಗಿ, ತನಗಾಗಿರುವ ಅನ್ಯಾಯಕ್ಕೆ ಎಚ್ಚೆತ್ತುಕೊಂಡಿದೆ ಎಂಬ ಭಾವನೆ ಮೂಡುವಂತಾಗಿದೆ, ದಕ್ಷಿಣ ಕನ್ನಡ ಹಾಗೂ ಹೈದ್ರಾಬಾದ್ ಕರ್ನಾಟಕದಲ್ಲಿ ರಾಜ್ಯ ಬಂದ್ ವಿಫಲವಾಗಿದ್ದಾಗ್ಯೂ. ಆದರೆ ರಾಜ್ಯದಾಚೆ ಸುದ್ದಿಯೇ ಆಗದ ಈ ಪ್ರತಿಭಟನೆ ಯಾರ ವಿರುದ್ಧ ಮತ್ತು ಏಕೆ ಎಂಬ ಪ್ರಶ್ನೆಗಳಿಗೆ ಎಡೆಕೊಡದೆ, ಕೈಲಾಗದವ ಮೈಪರಚಿಕೊಂಡ ಎಂಬಂತಹ ಆಸ್ಫೋಟನಾಕಾರಿ ಅಸಹಾಯಕತೆಯ ಪರಿಸ್ಥಿತಿಗೆ ದಾರಿ ಮಾಡಿಕೊಡುತ್ತಿದೆ ಎಂಬುದನ್ನು ಯಾರೂ ಗಮನಿಸಿದಂತಿಲ್ಲ.

೧೯೯೧ರಲ್ಲಿ ಕಾವೇರಿ ನ್ಯಾಯಾಧಿಕರಣದ ಮಧ್ಯಂತರ ತೀರ್ಪು ಪ್ರಕಟವಾದಾಗಲೂ ಇದಕ್ಕಿಂತ ಭಯಂಕರ ಚಳುವಳಿ ನಡೆದಿತ್ತು. ಆಗಿನ ಮುಖ್ಯ ಮಂತ್ರಿ ಬಂಗಾರಪ್ಪನವರು ತಾವು ಭಾರತವೆಂಬ ಒಕ್ಕೂಟದ ಅಂಗವಾಗಿರುವ ರಾಜ್ಯವೊಂದರ ಮುಖ್ಯಮಂತ್ರಿಯೆಂಬುದನ್ನು ಮರೆತು; ತೀರ್ಪನ್ನು ಧಿಕ್ಕರಿಸುವ ವೀರಾವೇಶದಲ್ಲಿ ತಮಿಳು ಜನರ ವಿರುದ್ಧ ಕಿಡಿಕಾರಿದ ಕಾರಣದಿಂದಾಗಿ ಹತ್ತಾರು ಜನ ಸತ್ತು, ಸಾರ್ವಜನಿಕರ, ವಿಶೇಷವಾಗಿ ತಮಿಳರ ಕೋಟ್ಯಾಂತರ ರೂಪಾಯಿಗಳ ಆಸ್ತಿಪಾಸ್ತಿ ನಷ್ಟವಾಗಿ, ಬೆಂಗಳೂರು ಸೇರಿದಂತೆ ಇಡೀ ಕಾವೇರಿ ಬಯಲು ರಣರಂಗವಾಗಿತ್ತು. ಈ ಅಪ್ರಬುದ್ಧ ನಿಲುವೇ ಪರೋಕ್ಷ ಕಾರಣವಾಗಿ ಬಂಗಾರಪ್ಪ ಅಧಿಕಾರ ಕಳೆದುಕೊಂಡರು. ಪರಿಣಾಮವಾಗಿ, ಮಧ್ಯಂತರ ತೀರ್ಪಿನ ಪ್ರಕಾರ ತಮಿಳ್ನಾಡಿಗೆ ನೀರು ಬಿಡಲಾಯಿತು. ಚಳುವಳಿ ತಣ್ಣಗಾಯಿತು.

ಇನ್ನು ರಾಜ್ಯ ನಾಯಕರಾಗಿರುವವರೆಗೆ ಪ್ರಾಣವನ್ನಾದರೂ ತೆತ್ತೇನು, ಕಾವೇರಿ ನೀರಿನ ಮೇಲಿನ ನ್ಯಾಯಬದ್ಧ ಹಕ್ಕನ್ನು ಬಿಟ್ಟುಕೊಡುವುದಿಲ್ಲ ಎಂದು ಘೋಷಿಸಿದ್ದ ದೇವೇಗೌಡರು, ಪ್ರಧಾನಮಂತ್ರಿಯಾದ ಕೂಡಲೇ ತಮಿಳು ನಾಡಿಗೆ ನೀರು ಬಿಡಲು ರಾತ್ರೋರಾತ್ರಿ ಆದೇಶಿಸಿದರು! ಆ ನೀರು ಹೇಮಾವತಿ ನೀರು ಎಂದು ಅವರು ಜನರನ್ನು ಯಾಮಾರಿಸಲು ಪ್ರಯತ್ನಿಸಿದ್ದುಂಟು. ೫ ವರ್ಷಗಳ ನಂತರ ಕಾವೇರಿ ಬಯಲಿನ ವರಪುತ್ರ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಬರಗಾಲ ಬಂದಾಗ, ಅವರೂ ಬಂಗಾರಪ್ಪನವರಂತೆಯೇ ವೀರಾವೇಶ ತೋರಿ ನೀರು ಬಿಡಲು ನಿರಾಕರಿಸಿದಾಗ ಈ ವಿವಾದ ಮತ್ತೆ ಭುಗಿಲೆದ್ದಿತು. ಆಗಲೂ ಈಗಿನಂತೆಯೇ ಇಡೀ ರಾಜ್ಯವೇ ಎದ್ದು ನಿಂತು ಕೃಷ್ಣರನ್ನು ಬೆಂಬಲಿಸಿತ್ತು. ಆದರೆ ಆವರೆಗೆ ಕಾವೇರಿ ರೈತ ಹಿತರಕ್ಷಣಾ ಸಮಿತಿಯ ನೇತೃತ್ವ ವಹಿಸಿ ಮಂಡ್ಯದ ಜಿಲ್ಲೆಯ ರೈತರನ್ನು ದೀರ್ಘ ಹೋರಾಟಕ್ಕೆ ಅಣಿ ಮಾಡಿದ್ದ ನಿಷ್ಠುರವಾದಿ ನಾಯಕರೆಂದೇ ಹೆಸರಾಗಿದ್ದ ಜಿ.ಮಾದೇಗೌಡರು, ತನ್ನ ಒಕ್ಕೂಟ

ವಿರೋಧಿ ನಿಲುವಿನಿಂದಾಗಿ ಸುಪ್ರೀಂ ಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡ ಕೃಷ್ಣರ ಅಧಿಕಾರ ರಕ್ಷಣೆಯ ನಾಜೂಕಿನ ಆಮಿಷ ರಾಜಕಾರಣಕ್ಕೆ ಬಲಿಬಿದ್ದು, ವಿಷಾದ ಯೋಗಕ್ಕೆ ಸಿಕ್ಕಿ ಹೋರಾಟಕ್ಕೆ ಕಡಿವಾಣ ಹಾಕಿದರು. ಅಲ್ಲಿಂದಾಚೆಗೆ ಕಾವೇರಿ ಹೋರಾಟ ಸ್ಥಗಿತಗೊಂಡಿತ್ತೆಂದೇ ಹೇಳಬೇಕು. ಆಗ ಮಲಗಿದ ಕನ್ನಡಿಗರು ಈಗ ಕಾವೇರಿಯ ಅಂತಿಮ ತೀರ್ಪು ಹೊಸ್ತಿಲ ಬಳಿ ಬಂದಾಗ ಎದ್ದು, ಮನೆಗೆ ಬೆಂಕಿ ಬಿದ್ದ ಆತಂಕದಲ್ಲಿ ಬಾಯಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಈ ಅಸಹಾಯಕತೆ ಗೊಂದಲಗಳಲ್ಲಿ, ಕನ್ನಡಿಗರಿಗೆ ಬೆಂಕಿ ಆರಿಸುವ ನೀರು ಎಲ್ಲಿದೆ ಎಂಬುದರ ಕಡೆ ಗಮನವೇ ಇಲ್ಲದಾಗಿದೆ ಹಾಗೂ ಕನ್ನಡದ ಮನೆಗೆ ಏಕೆ ಹೀಗೆ ಪದೇ ಪದೇ ಬೆಂಕಿ ಬೀಳುತ್ತಿದೆ ಎಂಬುದರ ಬಗ್ಗೆ ಯೋಚಿಸುವ ಶಕ್ತಿಯನ್ನೇ ಅವರು ಕಳೆದುಕೊಂಡಂತೆ ತೋರುತ್ತದೆ.

ಬಂಗಾರಪ್ಪನವರ ಅಪ್ರಬುದ್ಧ ರಾಜಕಾರಣ, ದೇವೇಗೌಡರ ಆತ್ಮ ವಂಚನೆಯ ರಾಜಕಾರಣ ಹಾಗೂ ಕೃಷ್ಣ–ಮಾದೇಗೌಡರ ಸ್ವಾರ್ಥ ರಾಜಕಾರಣದ ಈ ಪ್ರಸಂಗಗಳು, ಕನ್ನಡಿಗರ ದೀರ್ಘ ಕರ್ಮಕಥೆಯ ಇತ್ತೀಚಿನ ದೃಷ್ಟಾಂತ ಗಳಾಗಿವೆಯಷ್ಟೇ. ಭಾರತವೆಂಬ ಒಕ್ಕೂಟದ ರಾಜಕಾರಣದಲ್ಲಿ ತನ್ನದೇ ಆದ ರಾಜಕಾರಣದ ಅವಕಾಶವನ್ನು ಕಲ್ಪಿಸಿಕೊಳ್ಳದೇ ಹೋಗಿರುವ ಕರ್ನಾಟಕದ ರಾಜಕಾರಣ; ಯಾವುದೇ ಪಕ್ಷ ಅಥವಾ ಪಕ್ಷಗಳ ಸರ್ಕಾರವಿದ್ದಾಗಲೂ, ಅಖಿಲ ಭಾರತ ರಾಜಕಾರಣದ ವಿಧೇಯ ಬಾಲಕನಂತೆ ವರ್ತಿಸುತ್ತಾ ಬರುತ್ತಿರುವುದನ್ನು ಕರ್ನಾಟಕದ ೫೦ ವರ್ಷಗಳ ಇತಿಹಾಸದುದ್ದಕ್ಕೂ ನಾವು ಕಾಣಬಹುದು. ಇದರ ಹಿಂದೆ ಕನ್ನಡ ರಾಜ್ಯದ ರಾಜಕಾರಣವು ಟಿಪ್ಪು ಸುಲ್ತಾನ್–ಬ್ರಿಟಿಷ್ ಸರ್ಕಾರದ ಮುಖಾಮುಖಿಯಲ್ಲಿ ಛಿದ್ರ ವಿಚ್ಛಿದ್ರವಾಗಿ ಹೋದ ಐತಿಹಾಸಿಕ ದುರಂತವೂ ಇರಬಹುದು. ಅದರ ಜೊತೆಗೆ, ಕರ್ನಾಟಕ ಏಕೀಕರಣ ಚಳುವಳಿಯು ಕನ್ನಡದ ಜನತೆಯನ್ನು ತನ್ನದೇ ಸಾಂಸ್ಕೃತಿಕ ಪ್ರಜ್ಞೆಯ ಹುರುಪಿನಲ್ಲಿ ಒಗ್ಗೂಡಿಸಿದಂತೆ, ತನ್ನದೇ ರಾಜಕೀಯ ಪ್ರಜ್ಞೆಯ ಎಚ್ಚರದಲ್ಲಿ ಒಗ್ಗೂಡಿಸುವಲ್ಲಿ ವಿಫಲವಾಗುತ್ತಾ ಬಂದಿರುವ ವರ್ತಮಾನದ ಕನ್ನಡ ಚಳುವಳಿಯ ಬೇಜವಾಬ್ದಾರಿತನವೂ ಇದೆಯೆಂಬುದನ್ನೂ ನಾವು ಮರೆಯಬಾರದು.

ಇಂದು ನಾವು ಕಾವೇರಿ ಚಳುವಳಿಯನ್ನು ಯಾರ ವಿರುದ್ಧ, ಯಾರ ಗಮನ ಸೆಳೆಯಲು ಮಾಡುತ್ತಿದ್ದೇವೆ? ಕಾವೇರಿ ನ್ಯಾಯಾಧಿಕರಣವೇನೂ ಕೇಂದ್ರದ ಅಂಗ ಸಂಸ್ಥೆಯಲ್ಲ. ಅದೊಂದು ಸ್ವಾಯತ್ತ ಸ್ವತಂತ್ರ ನ್ಯಾಯ ಪ್ರಾಧಿಕಾರ, ಅದು ರಚಿತವಾದದ್ದೂ ಸಂಬಂಧಪಟ್ಟ ರಾಜ್ಯಗಳ ನಡುವೆ ಎಲ್ಲ ಸಂಧಾನ

ಪ್ರಯತ್ನಗಳು ಮುರಿದು ಬಿದ್ದಾಗ, ಅಲ್ಲಿ, ಈ ಎಲ್ಲ ರಾಜ್ಯಗಳು ತಮ್ಮ ನ್ಯಾಯೋಚಿತ ಪಾಲನ್ನು ಪ್ರತಿಪಾದಿಸುವ ಎಲ್ಲ ಅವಕಾಶಗಳನ್ನು ಹೊಂದಿದ್ದವು. ೧೯೨೪ರಲ್ಲಿ, ಮೈಸೂರು ಸಂಸ್ಥಾನದ ಮೇಲೆ ಪರೋಕ್ಷ ಅಧಿಕಾರ ಹೊಂದಿದ್ದ ಬ್ರಿಟಿಷ್ ಸರ್ಕಾರ, ತಾನು ನೇರ ಅಧಿಕಾರ ಹೊಂದಿದ್ದ ಮದ್ರಾಸ್ ಪ್ರಾಂತ್ಯಕ್ಕೆ ಹೆಚ್ಚು ಕಾವೇರಿ ನೀರನ್ನು ಒದಗಿಸುವ ಒಪ್ಪಂದವನ್ನು ನಮ್ಮ ಮೇಲೆ ಹೇರಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಸ್ವಾತಂತ್ರ್ಯ ಪೂರ್ವದ ಆ ಒಪ್ಪಂದವನ್ನು ಭಾರತದ ಹೊಸ ಸಂವಿಧಾನದಡಿಯಲ್ಲಿಯೂ ೧೯೭೪ರ ಇಕ್ಕಟ್ಟಿನ ಸಂದರ್ಭದವರೆಗೂ, ಅದನ್ನು ಪ್ರಶ್ನಿಸಲಾಗದ ಕರ್ನಾಟಕದ ರಾಜಕೀಯ ಇಚ್ಛಾಶಕ್ತಿಯ ದಟ್ಟ ದಾರಿದ್ರ್ಯದ ಬಗ್ಗೆ ಏನು ಹೇಳೋಣ? ಹೆಚ್ಚು ನೀರು ಕೇಳುವುದಕ್ಕೆ ಬೆಂಬಲವಾಗಿ ಅದಕ್ಕೆ ತಕ್ಕುನಾದ ಹೆಚ್ಚುವರಿ ನೀರಾವರಿ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗದೆ ಹೋದ ನಮ್ಮ ಸರ್ಕಾರಗಳ ದೂರದೃಷ್ಟಿಯ ಅಭಾವದ ಬಗ್ಗೆ ವೀರಕನ್ನಡಿಗರಾದ ನಾವೇಕೆ ಈವರೆಗೆ ಬಾಯಿ ಮುಚ್ಚಿ ಕುಳಿತಿದ್ದೆವು? ತುರ್ತಾಗಿ ಉತ್ತರಿಸಬೇಕಾದ ಪ್ರಶ್ನೆಗಳಿವು.

೧೯೯೧ರ ಮಧ್ಯಂತರ ತೀರ್ಪೇ, ನಾವು ನಮ್ಮ ನ್ಯಾಯೋಚಿತ ಪಾಲನ್ನು ಕೇಳುವಲ್ಲಿ ಹಲವಾರು ನೆಲೆಗಳಲ್ಲಿ ಎಡವುತ್ತಿದ್ದೇವೆ-ತುಕ್ಕು ಹಿಡಿದು ಬದ್ಧತೆ ಕಳೆದುಕೊಂಡಿರುವ ಅಧಿಕಾರಶಾಹಿ, ಅದರ ಜೊತೆ ಶಾಮೀಲಾಗಿರುವ ಭ್ರಷ್ಟ ರಾಜಕೀಯ ವ್ಯವಸ್ಥೆ, ಇದನ್ನು ಸಹಿಸಿಕೊಳ್ಳುತ್ತಾ ಬಂದಿರುವ ಕನ್ನಡ ಜನತೆಯ ಅಭಿಮಾನ ಶೂನ್ಯತೆ-ಎಂಬುದರ ಎಚ್ಚರಿಕೆಯ ಗಂಟೆಯಾಗಬೇಕಿತ್ತು. ಆದರೆ ಈಗ ಹೊರ ಬಿದ್ದಿರುವ ಅಂತಿಮ ತೀರ್ಪು, ಹೆಚ್ಚು ಕಡಿಮೆ ಆ ಮಧ್ಯಂತರ ತೀರ್ಪಿನ ಮುಂದುವರಿಕೆ ಹಾಗೂ ಅಧಿಕೃತ ಆವೃತ್ತಿಯಾಗಿದೆ ಎಂಬುದು ಏನನ್ನು ಸೂಚಿಸುತ್ತದೆ? ಕರ್ನಾಟಕ ಸರ್ಕಾರ ೧೭ ವರ್ಷಗಳ ಅವಧಿಯಲ್ಲಿ ನ್ಯಾಯಾಧಿಕರಣದ ಮುಂದೆ ತನ್ನ ನ್ಯಾಯೋಚಿತ ಪಾಲನ್ನು ಸೂಕ್ತ ದಾಖಲೆಗಳು, ಅಂಕಿ-ಅಂಶಗಳು ಹಾಗೂ ತನ್ನ ಮುಂದಿನ ನೀರಾವರಿ ಯೋಜನೆಗಳ ಕಾರ್ಯ ಸಾಧ್ಯತೆಯ ವರದಿಗಳ ಮೂಲಕ ಸಮರ್ಥವಾಗಿ ಪ್ರತಿಪಾದಿಸುವಲ್ಲಿ ಸೋತಿದೆ ಎಂದಷ್ಟೇ ಇದು ಸೂಚಿಸುತ್ತದೆ ಅಲ್ಲವೇ? ಇದಕ್ಕೆ ಈವರೆಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ? ಕರ್ನಾಟಕದ ಪರ ವಾದಿಸಲು ಕರ್ನಾಟಕದ ಒಬ್ಬ ವಕೀಲನೂ ಸಮರ್ಥನಿಲ್ಲ ಎಂದರೆ ನಾವು ಯಾವ ಸ್ಥಿತಿ ಮುಟ್ಟಿದ್ದೇವೆ! ನಮಗೆ ಉದ್ದೇಶಪೂರ್ವಕ ಅನ್ಯಾಯ ಮಾಡಲು, ನ್ಯಾಯಾಧಿಕರಣದ ಸದಸ್ಯರೇನು ತಮಿಳ್ನಾಡಿನ ಅಳಿಯ-ಭಾವಂದಿರೇನೂ ಅಲ್ಲವಲ್ಲ? ತಮಿಳುನಾಡಿನ

ರಾಜಕಾರಣಿಗಳು ಕಾವೇರಿ ನ್ಯಾಯಮಂಡಳಿ ಮೇಲೆ ಪ್ರಭಾವವನ್ನೋ, ಒತ್ತಡವನ್ನೋ ತಂದಿದ್ದಾರೆಂದು ಇಂದು ಜನ ಆಡಿಕೊಳ್ಳುತ್ತಿದ್ದಾರೆ. ಇದು ತಮಿಳುನಾಡಿನ ರಾಜಕಾರಣಿಗಳ ಬದ್ಧತೆಗಿಂತ ಹೆಚ್ಚಾಗಿ ಕರ್ನಾಟಕದ ರಾಜಕಾರಣಿಗಳ ಬೇಜವಾಬ್ದಾರಿತನವನ್ನು ಪ್ರತಿಬಿಂಬಿಸುತ್ತದೆ ಎಂಬ ಪರಿವೆಯಾದರೂ ನಮ್ಮ ರಾಜಕಾರಣಿಗಳಿಗೆ ಬೇಡವೆ? ಇದು ಮತ್ತೆ ಕರ್ನಾಟಕದ ಈವರೆಗಿನ ರಾಜಕೀಯ ನಾಯಕತ್ವದ ವೈಫಲ್ಯವಲ್ಲವೇ?

ಅಂದರೆ ಕರ್ನಾಟಕಕ್ಕೆ ಈವರೆಗೆ ತನ್ನದೆನ್ನಿಸುವ ರಾಜಕೀಯ ನಾಯಕತ್ವ ದೊರೆತೇ ಇಲ್ಲ ಎಂದರ್ಥ. ಅಂತಹ ನಾಯಕತ್ವದ ಕಳೆದ ೫೦ ವರ್ಷಗಳಲ್ಲಿ ತಮಿಳ್ನಾಡಿಗೆ ದೊರಕಿರುವುದರಿಂದಲೇ ಅದು ಭಾರತದ ಒಕ್ಕೂಟದ ಚೌಕಟ್ಟಿನಲ್ಲೂ ಏನನ್ನೂ ಕಳೆದುಕೊಳ್ಳದೆ ತನ್ನ ಭಾಷೆ, ಸಂಸ್ಕೃತಿ, ಅಭಿವೃದ್ಧಿ ಈ ಮೂರು ವಿಷಯಗಳಲ್ಲಿ ಯಾವ ರಾಜಿಗೂ ಎಡೆಗೊಡದೆ ತನಗೆ ದಕ್ಕಬೇಕಾದ್ದನ್ನು ದಕ್ಕಿಸಿಕೊಂಡು, ತನ್ನ ಆತ್ಮಗೌರವವನ್ನು ಕಾಪಾಡಿಕೊಂಡು ಬಂದಿದೆ. ಕರ್ನಾಟಕದಲ್ಲಿಯಂತೆಯೇ ತಮಿಳ್ನಾಡಿನಲ್ಲಿಯೂ ಈ ೫೦ ವರ್ಷಗಳಲ್ಲಿ ಅನೇಕ ರಾಜಕೀಯ ಸ್ಥಿತ್ಯಂತರಗಳು ಆಗಿ ಹೋಗಿ ವಿವಿಧ ರಾಜಕೀಯ ದೃಷ್ಟಿಕೋನಗಳ ಪಕ್ಷಗಳು ಸರ್ಕಾರ ನಡೆಸಿವೆಯಾದರೂ, ಅವೆಲ್ಲವೂ ತಮಿಳರ ಸರ್ಕಾರಗಳೇ ಆಗಿದ್ದುದರಿಂದ ಇದು ಸಾಧ್ಯವಾಗಿದೆ ಎಂಬುದನ್ನು ನಾವು ಗಮನಿಸಬೇಕು. ಅಲ್ಲದೆ, ಈ ಸಾಧ್ಯತೆಯ ಹಿಂದೆ ತಮಿಳು ಕುಲ ಪ್ರಜ್ಞೆ ಮೂಲ ಸ್ಫೂರ್ತಿಯಾಗಿ ಕೆಲಸ ಮಾಡುತ್ತಿದೆ: ಅದೇ ತಮಿಳ್ನಾಡಿನ ಹಿತವನ್ನು ಎಲ್ಲ ರಂಗಗಳಲ್ಲೂ ಕಾಪಾಡುತ್ತಿರುವ ಶಕ್ತಿಯಾಗಿದೆ ಎಂಬುದೇ ಇಲ್ಲಿನ ಆಳದ ಸತ್ಯವಾಗಿದೆ. ಆದರೆ ಈವರೆಗಿನ ಕರ್ನಾಟಕ ಸರ್ಕಾರಗಳು ಕನ್ನಡಿಗರ ಸರ್ಕಾರಗಳಾಗಿರದೆ, ಭಾರತ ಒಕ್ಕೂಟದಡಿಯ ಒಂದು ಸಾಮಂತ ಸರ್ಕಾರದಂತೆ ವರ್ತಿಸುವುದರಲ್ಲೇ ತನ್ನ ಧನ್ಯತೆಯನ್ನು ಕಂಡುಕೊಳ್ಳುತ್ತಿರುವುದೇ, ಕರ್ನಾಟಕದ ಜನತೆಯ ಪಾಲಿಗೆ ಶಾಪವಾಗಿದೆ. ನಿಜಲಿಂಗಪ್ಪನವರಿಂದ ಹಿಡಿದು ದೇವೇಗೌಡರ ಕಾಲದವರೆಗೆ ಈ ಶಾಪ ವಿಸ್ತರಿಸುತ್ತ ಬಂದಿದೆ.

ತಮಿಳು ಸಮಾಜಕ್ಕೆ ಒಂದು ಸತತವಾದ ಹಾಗೂ ಸ್ಥಿರವಾದ ಸಾಂಸ್ಕೃತಿಕ ಸ್ಮೃತಿ ಇರುವುದು ಅದರ ಶಕ್ತಿಯಾಗಿದ್ದರೆ, ಕನ್ನಡ ಸಮಾಜ ಒಂದು ಶತಮಾನಕ್ಕೂ ಹಿಂದೆ ಅಂತಿಮ ಮೈಸೂರು ಯುದ್ಧದಲ್ಲಿ ಅದನ್ನು ಕಳೆದುಕೊಂಡದ್ದು ಅದರ ದೌರ್ಬಲ್ಯವಾಗಿ ಇಂದಿಗೂ ಕಾಡುತ್ತಿದೆ. ಆದರೆ ಕಳೆದು ಹೋಗಿರುವ ಈ ಕನ್ನಡ ಕುಲ ಪ್ರಜ್ಞೆಯನ್ನು ಪುನರ್ಸಂಘಟಿಸುವ ರೀತಿಯಲ್ಲಿ ಕರ್ನಾಟಕ ಏಕೀಕರಣ

ಚಳುವಳಿ ನಂತರದ ವರ್ಷಗಳಲ್ಲಿ ಕನ್ನಡ ಚಳುವಳಿಯಾಗಿ ಬೆಳೆಯದೇ ಇರುವುದು, ಈ ದೌರ್ಬಲ್ಯ ಒಂದು ಮಾನಸಿಕ ರೋಗವಾಗಿ ಮಾರ್ಪಾಟಾಗಿ ಕನ್ನಡಿಗನ ಅಸಹಾಯಕತೆಗೆ ಕಾರಣವಾಗಿದೆ. ಬರೀ ಭಾವಾವೇಶದ, ಪ್ರದರ್ಶನ ವ್ಯಸನದಿಂದ ಕೂಡಿದ ಈ ಚಳುವಳಿ ಬೆಂಗಳೂರು ಕೇಂದ್ರಿತವಾಗಿ, ಅಲ್ಲಿನ ಕೆಲವರ ನೇತೃತ್ವದಲ್ಲಿ ಒಂದು ದಂಧೆಯಂತೆ ಕಾಣತೊಡಗಿ ಜನಸಾಮಾನ್ಯರ ಗಂಭೀರ ಗಮನವನ್ನು ಸೆಳೆಯದೇ ಹೋಗಿದೆ. ಆದುದರಿಂದ ಕಳೆದುಹೋಗಿರುವ ಕನ್ನಡಿಗರ 'ಆತ್ಮ'ವನ್ನು ಪುನಃಸ್ಥಾಪಿಸಬಲ್ಲ ಚಳವಳಿ ಮಾತ್ರ ಈ ಶಾಪವನ್ನು ಪರಿಹರಿಸಬಲ್ಲದು. ಇದು ಸಾಧ್ಯವಾಗುವುದು ಕರ್ನಾಟಕದ ರಾಜಕಾರಣ ತನ್ನ ಶಕ್ತಿವಿಶಿಷ್ಟತೆಯನ್ನು ಒಕ್ಕೂಟದ ರಾಜಕಾರಣದಲ್ಲಿ ತೋರಿಸಬಲ್ಲದಾದಾಗ ಮಾತ್ರ. ಇಂತಹ ಶಕ್ತಿ ಸಂಚಯ ಮಾಡಿಕೊಂಡ ತಮಿಳುನಾಡು, ಬಂಗಾಳ ಮುಂತಾದ ರಾಜ್ಯಗಳು ಮಾತ್ರ ಭಾರತದ ಒಕ್ಕೂಟದಲ್ಲಿ ಆತ್ಮವಿಶ್ವಾಸದಲ್ಲಿ ಮುನ್ನಡೆದಿವೆ.

ಕರ್ನಾಟಕದಂತಹ ವಿಧೇಯ ರಾಜ್ಯಗಳು ಅಳುಬುರಕನಂತೆ ಒಮ್ಮೆ ಯಾರಿಗೂ ಕೇಳದಂತೆ ಅಳುತ್ತಾ, ಮತ್ತೊಮ್ಮೆ ಎಲ್ಲರೂ ಕೇಳಿಸಿಕೊಂಡು ಸಹಾನುಭೂತಿ ತೋರಲೆಂಬಂತೆ ಚೀರುತ್ತಾ ಕಾಲ ತಳ್ಳುತ್ತಿವೆ. ಹೀಗಾಗಿಯೇ ನಮ್ಮ ಮುಖ್ಯಮಂತ್ರಿಗಳು ಕಾವೇರಿ ತೀರ್ಪಿನ ಬಗ್ಗೆ ಪ್ರಧಾನಿ ಬಳಿ ದೂರು ದುಮ್ಮಾನ ಹೇಳಿಕೊಳ್ಳಲು ಹೋಗಿ ಕೊನೆಗೆ ಏನೂ ಹೇಳಲಾಗದೇ ಬೇರೇನೋ ಕಷ್ಟ–ಸುಖ ಮಾತಾಡಿಕೊಂಡು ಬರುವಂತಾಗಿರುವುದು, ಜಾಗತಿಕ ರಾಜಕಾರಣದ ಉತ್ಪನ್ನದಂತಿರುವ ಆ ಪ್ರಧಾನಿಯೋ, ಕಾವೇರಿ ಗಲಾಟೆಯಿಂದ ಐ.ಟಿ ಉದ್ಯಮಕ್ಕೆ ತೊಂದರೆಯಾಗಿಲ್ಲ ತಾನೇ ಎಂದು ಕೇಳುವ ಮೂಲಕ ಇಡೀ ರಾಜ್ಯದ ಕ್ಷೇಮ ಸಮಾಚಾರ ವಿಚಾರಿಸಿಕೊಂಡರಂತೆ!. ಇದು ಕನ್ನಡಿಗರ ಕರ್ಮ ಕಥೆ.....

ಕರ್ನಾಟಕದ ರಾಜಕಾರಣಿಗಳೆಲ್ಲರಿಗೂ ಭಾರತದ ರಾಜಕಾರಣದ ಭಯ! ಬುಡಭದ್ರವಿಲ್ಲದವರ ಭಯವಿದು. ಇಲ್ಲಿ ಸಂದರೆ ಅಲ್ಲಿಯೂ ಸಲ್ಲಬಲ್ಲೆವು ಎಂಬುದಕ್ಕೆ ಬದಲಾಗಿ, ಅಲ್ಲಿ ಸಂದರೆ ಮಾತ್ರ ಇಲ್ಲಿ ಸಲ್ಲುವುದು ಎಂಬ ತಲೆಕೆಳಗಾದ ರಾಜಕೀಯ ಗ್ರಹಿಕೆ ಇವರದು! ಕುಲಪ್ರಜ್ಞೆ ಇಲ್ಲದ ಜನ ತಮ್ಮ ಮತದಾರ ಕುಲದ ಬಗೆಗೂ ಗೌರವ ಇಟ್ಟುಕೊಳ್ಳಲಾರರೇನೋ.... ಹಾಗಾಗಿಯೇ ಪಕ್ಷಬೇಧವಿಲ್ಲದೆ ಕರ್ನಾಟಕದ ಇಡೀ ರಾಜಕೀಯ ನಾಯಕತ್ವವು ಕಾವೇರಿ ತೀರ್ಪಿನ ವಿವಾದವನ್ನು ಬೀದಿ ಕಾಳಗದ ನಾಯಕರಿಗೆ ಒಪ್ಪಿಸಿಬಿಟ್ಟು ತಂತಮ್ಮ ಪಕ್ಷಗಳ ರಾಜಕೀಯ ಲಾಭನಷ್ಟಗಳ ಲೆಕ್ಕಾಚಾರದಲ್ಲಿ ತೊಡಗಿ: ತಂತಮ್ಮ ನಿರ್ಣಾಯಕ ಅಭಿಪ್ರಾಯಗಳನ್ನು ಇನ್ನೂ ಕಾದಿರಿಸಿಕೊಂಡಿದ್ದಾರೆ!. ನಮ್ಮ

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ನೀರಾವರಿ ಮಂತ್ರಿ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರದ ಮಹಾಪೋಷಕರೂ, ನೀರಾವರಿ ರಾಜಕಾರಣದ ಅಧ್ವರ್ಯುಗಳೂ ಆದ ದೇವೇಗೌಡರೂ ಸೇರಿದಂತೆ, ಈ ತೀರ್ಪಿನ ಬಗ್ಗೆ ಹದಿನೈದು ದಿನ ಕಳೆದರೂ ತೀರ್ಪಿನ ಸಾವಿರ ಪುಟಗಳ ವಿಸ್ತಾರದ ನೆಪವೊಡ್ಡಿ ಸರ್ಕಾರದ ಪರವಾಗಿ ಯಾರೊಬ್ಬರೂ ಒಂದು ಅಭಿಪ್ರಾಯವನ್ನೋ, ಅನುಸರಿಸಬೇಕಾದ ದಾರಿಯ ದಿಕ್ಕನ್ನೋ ಸೂಚಿಸಲಾಗದಷ್ಟು ಗೊಂದಲದಲ್ಲಿದ್ದಾರೆಂದರೆ, ಈ ನಾಯಕತ್ವಕ್ಕೆ ರಾಜ್ಯದ ಜನತೆ ಕುರಿತ ಬದ್ಧತೆಗಿಂತ ಹೆಚ್ಚಾಗಿ ಬೇರೇನೋ ಬದ್ಧತೆ ಇದೆಯೆಂದೇ ಅರ್ಥ. ಈ ಬೇರೇನೋ ಬದ್ಧತೆ ಇನ್ನೇನೂ ಆಗಿರದೆ ಕುರ್ಚಿ ಭದ್ರತೆ ಮಾತ್ರವಾಗಿದೆ. ಇದು ಇಡೀ ಕರ್ನಾಟಕದ ರಾಜಕಾರಣವನ್ನು ಬಾಧಿಸುತ್ತಿರುವ ವಾಸಿಯಾಗದ ರೋಗವಾಗಿದೆ.

ಜನ ಹೀಗೆ ಏನೋ ಅಂದುಕೊಳ್ಳುತ್ತಾ, ಊಹಿಸಿಕೊಳ್ಳುತ್ತಾ, ಕೋಪಗೊಳ್ಳುತ್ತಾ, ಅವರಿವರ ಪ್ರತಿಕೃತಿಗಳನ್ನು ಸುಡುತ್ತಾ ಎಷ್ಟು ದಿನ ಕಾಲ ಕಳೆಯಬೇಕು? ಕೊನೆಗೆ ನಮ್ಮ ಸರ್ಕಾರವೇ ಈ ತೀರ್ಪನ್ನು ಒಕ್ಕೂಟ ವ್ಯವಸ್ಥೆಯ ನಿರ್ಬಂಧಗಳಿಂದಾಗಿ ಸಣ್ಣಪುಟ್ಟ ಹೊಂದಾಣಿಕೆಗಳೊಂದಿಗೆ ಒಪ್ಪಬೇಕಾದ ಸಂದರ್ಭ ಬಂದರೆ(ಅಂದರೆ ಕಾರ್ನಾಡರ ಅಭಿಪ್ರಾಯಕ್ಕೆ ಮನ್ನಣೆ ಸಿಗುವಂತಾದರೆ) ವೀರಾವೇಶದಿಂದ ಚಳುವಳಿ ನಡೆಸುತ್ತಿರುವ ರಾಜ್ಯದ ಜನತೆಗೆ ಆಗುವ ಮುಖ ಭಂಗಕ್ಕೆ ಯಾರು ಹೊಣೆ? ಕೃಷ್ಣ ಕಣಿವೆ ನೀರಿನ ವಿವಾದದ ತೀರ್ಪಿನ ಬಗ್ಗೆ ಮೇಲ್ಮನವಿ ಸಲ್ಲಿಸಿ ಈವರೆಗೂ ನಾವೇನೂ ಪಡೆಯಲಾಗಿಲ್ಲ ಎಂಬ ಅರಿವು ನಮಗಿದೆಯೇ? ಸುಪ್ರೀಂ ಕೋರ್ಟ್ ಈಗಾಗಲೇ ನ್ಯಾಯಾಧಿಕರಣದ ಕಾರ್ಯಾಚರಣೆಗೆ ಸಂಬಂಧಿಸಿದಂತೆ ತಾನು ಹಸ್ತಕ್ಷೇಪ ಮಾಡಬಯಸುವುದಿಲ್ಲ ಎಂದು ಸ್ಪಷ್ಟಪಡಿಸಿರುವುದು ನಮಗೆ ಗೊತ್ತಿದೆಯಲ್ಲವೇ?

ಪರಿಸ್ಥಿತಿ ಇಷ್ಟು ಕಷ್ಟಕರವಿರುವಾಗ, ಕರ್ನಾಟಕದ ಮುಂದೆ ಇರುವ ಸದ್ಯದ ಆಯ್ಕೆಗಳು ಇವು ಮಾತ್ರ:

೧. ಈ ತೀರ್ಪಿನ ದುರ್ಬಲ ಅಂಶಗಳನ್ನು ಗುರುತಿಸಿ, ಅವುಗಳ ಆಧಾರದ ಮೇಲೆ ಮೇಲ್ಮನವಿ ಸಲ್ಲಿಸುವುದು ಮತ್ತು ಇದಕ್ಕೆ ಸಂಬಂಧಪಟ್ಟ ಅಧಿಕಾರಶಾಹಿಯನ್ನು ಜವಾಬ್ದಾರರನ್ನಾಗಿ ಮಾಡಿ, ಹೊಸ ಮಾಹಿತಿ ಹಾಗೂ ಶ್ರದ್ಧೆಯೊಂದಿಗೆ ವಾದ ಮಂಡಿಸುವ ಛಾತಿ ತೋರುವುದು.

೨. ಅಂತಿಮ ತೀರ್ಪಿನಲ್ಲಿ ಅವಕಾಶ ಮಾಡಿಕೊಡಲಾಗಿರುವ ಹೆಚ್ಚಿನ ನೀರಿನ ಪಾಲು ಹಾಗೂ ಹೆಚ್ಚುವರಿ ನೀರಾವರಿ ಪ್ರದೇಶದ ಅಭಿವೃದ್ಧಿಯ ಪೂರ್ಣ

ಪ್ರಯೋಜನವನ್ನು ಪಡೆದುಕೊಳ್ಳುವ ರೀತಿಯಲ್ಲಿ ನಮ್ಮ ನೀರಾವರಿ ಪದ್ಧತಿ ಹಾಗೂ ಬೆಳೆ ಪದ್ಧತಿಗಳನ್ನು ವ್ಯವಸ್ಥಿತವಾಗಿ ಪರಿಷ್ಕರಿಸುವುದು. ಉದಾ: ಸಾಧ್ಯವಿದ್ದೆಡೆಯಲ್ಲಿ ಹನಿ ನೀರಾವರಿಯನ್ನು ಸೂಕ್ತ ಸೌಲಭ್ಯಗಳ ಒದಗಿಸುವಿಕೆ ಮೂಲಕ ಕಡ್ಡಾಯಗೊಳಿಸುವುದು.

೩. ತಮಿಳುನಾಡನ್ನು ಪ್ರತಿಸ್ಪರ್ಧಿಯನ್ನಾಗಿ ನೋಡದೆ, ಪ್ರಾದೇಶಿಕ ರಾಜಕಾರಣದ ಯಶಸ್ವಿ ಮಾದರಿ ಎಂಬಂತೆ ಪರಿಗಣಿಸಿ, ಸೋದರಭಾವದಿಂದ ಎರಡೂ ರಾಜ್ಯಗಳ ರೈತ ಬಾಂಧವರ ಮಧ್ಯಸ್ಥಿಕೆಯಲ್ಲಿ ಸಂಧಾನ ಆರಂಭಿಸುವುದು.

ಇದು ಕಾವೇರಿ ಸಮಸ್ಯೆಗಷ್ಟೇ ಪರಿಹಾರ ದಾರಿ ತೆರೆಯಬಹುದು. ಆದರೆ ಕರ್ನಾಟಕ, ನೆಲ, ಜಲ, ಭಾಷೆ, ಸಂಸ್ಕೃತಿ ಮತ್ತು ಅಭಿವೃದ್ಧಿ ಆದ್ಯತೆಗಳಿಗೆ ಸಂಬಂಧಿಸಿದಂತೆ, ಇತ್ತೀಚಿನ ವರ್ಷಗಳಲ್ಲಿ ಪದೇ ಪದೇ ಇಂತಹ ಸಂದಿಗ್ಧಗಳಿಗೆ ಸಿಕ್ಕಿ ಹಾಕಿಕೊಳ್ಳುತ್ತಿರುವುದನ್ನು ನಾವು ಗಮನಿಸದೇ ಇರಲಾಗದು. ಇದಕ್ಕೇನು ಕಾರಣವೆಂದು ಕನ್ನಡ ಜನತೆ ಆಳವಾಗಿ ಯೋಚಿಸಿ ಪರಿಹಾರದ ಕಡೆ ಕ್ಷಿಪ್ರ ಗಮನ ಹರಿಸಬೇಕಾಗಿದೆ. ಇಲ್ಲದೇ ಹೋದಲ್ಲಿ ಈಗಾಗಲೇ ಅನ್ಯ ಸಂಸ್ಕೃತಿಗಳ ದುರಾಕ್ರಮಣಕ್ಕೆ ಈಡಾಗಿ ಆತ್ಮದ ಜೊತೆಗೆ ತನ್ನ ಭೌತಿಕ ಚಹರೆಯನ್ನು ಕಳೆದುಕೊಳ್ಳುತ್ತಿರುವ ಕರ್ನಾಟಕ, ತನ್ನ ರಾಜಕಾರಣವನ್ನು ಇತರರಿಗೊಪ್ಪಿಕಸುವ ಕಾಲ ದೂರವಿಲ್ಲ. ಎಲ್ಲವೂ ಮಾರುಕಟ್ಟೆಯಾಗಿರುವ ಈ ದಿನಗಳಲ್ಲಿ ಕುಲಪ್ರಜ್ಞೆ ಇಲ್ಲದ ರಾಜಕಾರಣಿಗಳನ್ನು ಕೊಳ್ಳುವುದು ಅತಿ ಸುಲಭ. ಇದನ್ನರಿತ ಐ.ಟಿ, ಬಿ.ಟಿ.ಯೂ ಸೇರಿದಂತೆ ವಿವಿಧ ರಂಗಗಳ ಮಾಫಿಯಾಗಳು ಈಗಾಗಲೇ ಬೆಂಗಳೂರಿನಲ್ಲಿ ನೆಲೆಯೂರಿ, ರಾಜ್ಯ ರಾಜಕಾರಣವನ್ನು ನಿಯಂತ್ರಿಸುವ ನಿರಂತರ ಪ್ರಯತ್ನ ಮಾಡುತ್ತಿವೆ. ಹೀಗಿರುವಾಗ ಕನ್ನಡ, ಕರ್ನಾಟಕವನ್ನು ಉಳಿಸಿಕೊಳ್ಳುವ, ಅಂದರೆ ಕನ್ನಡ ಜನರ ಹಿತ ಕಾಪಾಡುವ ಏಕೈಕ ದಾರಿಯೆಂದರೆ ಕನ್ನಡ ಕುಲ ಪ್ರಜ್ಞೆಯನ್ನಾಧರಿಸಿದ ರಾಜಕಾರಣವನ್ನು ರೂಪಿಸುವುದೇ ಆಗಿದೆ. ಇದು ಮಾತ್ರ ಸದ್ಯದ ನರಸತ್ತ ಕನ್ನಡದ ಈಗಿನ ರಾಜಕೀಯ ನಾಯಕತ್ವವನ್ನು ಬುಡಮೇಲುಗೊಳಿಸಬಲ್ಲುದು. ಇದು ಮಾತ್ರ ಅಂತರರಾಷ್ಟ್ರೀಯ ಮಾಫಿಯಾಗಳ ಹುನ್ನಾರಗಳ ಜೊತೆ ಜೊತೆಗೆ ಭಾರತದ ಒಕ್ಕೂಟ ವ್ಯವಸ್ಥೆಯ ಒತ್ತಡಗಳನ್ನು ನಿವಾರಿಸಿಕೊಳ್ಳುವ ಆಂತರಿಕ ಶಕ್ತಿ ಹೊಂದಿರಬಲ್ಲುದು-ತಮಿಳುನಾಡಿನ ರಾಜಕಾರಣದ ಹಾಗೆ. ಕನ್ನಡಿಗರು ಯೋಚಿಸಬೇಕಾದ ಕಾಲವೀಗ ಬಂದಿದೆ. ಇದು ಸುಲಭದ ಕೆಲಸವಲ್ಲ. ಆದರೆ ಈ ಕೆಲಸಕ್ಕೆ ಕೈ ಹಾಕದೇ ಕನ್ನಡಿಗರಿಗೆ ಉಳಿಗಾಲವಿಲ್ಲ.

ಕರ್ಮ, ವಿಕರ್ಮ, ಅಕರ್ಮ

–ವಿನೋಬಾ

ಸ್ವಧರ್ಮವನ್ನು ಬಿಟ್ಟು ಅವಾಂತರ ಧರ್ಮವನ್ನು ಹಿಡಿದರೆ ನಿಷ್ಕಾಮ ಫಲ ಸಾಧ್ಯವೇ ಇಲ್ಲ. ಸ್ವದೇಶೀ ವಸ್ತುಗಳನ್ನು ಮಾರುವುದು ವ್ಯಾಪಾರದ ಸ್ವಧರ್ಮ. ಈ ಸ್ವದೇಶೀ ಧರ್ಮವನ್ನು ಬಿಟ್ಟು ೭,೦೦೦ ಮೈಲು ದೂರದ ವಿದೇಶಿ ಸಾಮಾನನ್ನು ಮಾರುವಾಗ ಹೆಚ್ಚು ಲಾಭ ಬರುತ್ತದೆಂಬ ಮಾತು ಮನಸ್ಸಿನಲ್ಲಿರುತ್ತದೆ.– ಆಗ ಅದರಲ್ಲಿ ನಿಷ್ಕಾಮ ಹೇಗೆ ಬಂದೀತು? ನಾವು ಮಾಡುವ ಕರ್ಮ ನಿಷ್ಕಾಮವಾಗಲು ಸ್ವಧರ್ಮದ ಆಚರಣೆ ಅಗತ್ಯ. ಸ್ವಧರ್ಮಾಚರಣೆ ಸಕಾಮವೂ ಆಗಬಲ್ಲದು.

ಅಹಿಂಸೆಯನ್ನೇ ನೋಡಿ. ಅಹಿಂಸೋಪಾಸಕನಿಗೆ ಹಿಂಸೆ ವರ್ಜ್ಯವೆ ತಾನೆ? ಆದರೆ ಹೊರಗಡೆ ಅಹಿಂಸಕನಾಗಿದ್ದರೂ ವಾಸ್ತವವಾಗಿ ಹಿಂಸಾಮಯನಾಗಿರಬಲ್ಲ. ಹಿಂಸೆ ಮನಸ್ಸಿನ ಗುಣ. ಹೊರಗೆ ಹಿಂಸಾಕರ್ಮ ಮಾಡದ ಮಾತ್ರಕ್ಕೆ ಮನಸ್ಸು ಅಹಿಂಸಕವಾಗದು. ಕತ್ತಿ ಹಿಡಿದರೆ ಹಿಂಸಾವೃತ್ತಿ ಸ್ಪಷ್ಟವಾಗಿ ಕಾಣುತ್ತದೆ. ಕತ್ತಿ ಬಿಟ್ಟರೆ ಅದು ಅಹಿಂಸೆ ಎನ್ನಲಾಗದು. ನಿಷ್ಕಾಮಕ್ಕಾಗಿ ಪರಧರ್ಮವನ್ನು ಬಿಡಲೇಬೇಕು. ಬಿಟ್ಟರೆ ನಿಷ್ಕಾಮಕ್ಕೆ 'ಗಣೇಶಾಯ ನಮಃ' ಆದಂತೆ. ಆದರೆ ಅದರಿಂದಲೇ ಗುರಿ ಮುಟ್ಟಿದಂತಾಗಲಿಲ್ಲ.

ನಿಷ್ಕಾಮತೆ ಮನಸ್ಸಿನ ಮನಸ್ಸಿನಲ್ಲಿ ಅರಳಲು ಬರೀ ಸ್ವಧರ್ಮಾಚರಣೆ ಸಾಲದು. ಉಳಿದ ಸಾಧನೆಗಳನ್ನೂ ಮಾಡಬೇಕಾದೀತು. ಬರೀ ಎಣ್ಣೆ ಹಾಕಿದ ಮಾತ್ರಕ್ಕೆ ದೀಪ ಉರಿಯುತ್ತದೆಯೆ? ಜ್ಯೋತಿಯೂ ಬೇಕು. ಬೆಳಕೂ ಬೇಕು, ಬೆಳಕು ಇದ್ದರೇನೇ ಕತ್ತಲು ಅಳಿದೀತು. ಸ್ವಧರ್ಮಾಚರಣೆಯ ಎಣ್ಣೆಗೂ ಬೆಳಕು ಬೇಕು. ಹೇಗೆ ಹೊತ್ತಿಸಬೇಕು ಈ ಬೆಳಕನ್ನು? ಅದಕ್ಕೆ ಮಾನಸಿಕ ಸಂಶೋಧನೆ ಬೇಕು. ಆತ್ಮಪರೀಕ್ಷೆ ಮಾಡಿ ಚಿತ್ತಕ್ಕೆ ಹತ್ತಿದ ಹೊಲಸನ್ನು ತೊಳೆಯಬೇಕು.

ನಾವು ತಿನ್ನುತ್ತೇವೆ, ಕುಡಿಯುತ್ತೇವೆ, ಮಲಗುತ್ತೇವೆ; ಇದೆಲ್ಲವೂ ಕರ್ಮವೇ. ಆದರೆ ಇವನ್ನು ಗೀತೆ ವಿಕರ್ಮವೆಂದಿಲ್ಲ. ಕರ್ಮದಲ್ಲಿ ನಿಷ್ಕಾಮ ತುಂಬಿಕೊಳ್ಳಬೇಕಾದರೆ ಇನ್ನೊಂದು ಹಿರಿಯ ನೆರವು ಬೇಕು; ಕಾಮ ಕ್ರೋಧಗಳನ್ನು ಗೆಲ್ಲುವುದು.

ಗಂಗಾಪ್ರವಾಹದಂತೆ ಚಿತ್ತವು ಶಾಂತವೂ ನಿರ್ಮಲವೂ ಆಗದೆ ನಿಷ್ಕಾಮವಿಲ್ಲ. ಚಿತ್ತಸಂಶೋಧನೆಗಾಗಿ ಮಾಡಬೇಕಾದ ಕರ್ಮಕ್ಕೆ ಗೀತೆ ವಿಕರ್ಮ ಎಂದು ಹೆಸರು ಕೊಟ್ಟಿದೆ. ಕರ್ಮ, ವಿಕರ್ಮ, ಅಕರ್ಮ ಈ ಮೂರು

ಶಬ್ದಗಳು ಬಹಳ ಮುಖ್ಯವಾದವು.

ಕರ್ಮವೆಂದರೆ ಸ್ವಧರ್ಮಾಚರಣೆಯ ಹೊರಗಿನ ಸ್ಥೂಲಕ್ರಿಯೆ : ಈ ಹೊರಗಿನ ಕರ್ಮದಲ್ಲಿ ಚಿತ್ತವನ್ನು ತುಂಬುವುದು ವಿಕರ್ಮ. ಹೊರಗಿನಿಂದ ನಾವು ನಮಸ್ಕಾರ ಮಾಡುತ್ತೇವೆ. ಹೊರಗೆ ತಲೆ ಬಾಗಿದುದಕ್ಕೆ ಜೊತೆಯಾಗಿ ಒಳಗೆ ಮನಸ್ಸು ಬಾಗದಿದ್ದರೆ ಆ ಕ್ರಿಯೆ ವ್ಯರ್ಥವಾದಂತೆ. ಅಂತರ್ - ಬಾಹ್ಯ ಒಂದಾಗಬೇಕು. ಹೊರಗೆ ನಾನು ಶಿವಲಿಂಗದ ಮೇಲೆ ಸತತ ಧಾರೆ ಎರೆದು ಅಭಿಷೇಕ ಮಾಡುತ್ತೇನೆ. ಇದರ ಜೊತೆಗೆ ಮಾನಸಿಕ ಚಿಂತನೆಯ ಅಖಂಡ ಧಾರೆ ಹರಿಯದಿದ್ದರೆ ಈ ಅಭಿಷೇಕಕ್ಕೆ ಏನು ಬೆಲೆ? ಇದುರಿನ ಲಿಂಗವೂ ಕಲ್ಲು, ನಾನೂ ಕಲ್ಲು. ಕಲ್ಲಿನಿದಿರಿಗೆ ಕಲ್ಲು ಕೂತಂತೆ. ಹೊರಗಿನ ಕರ್ಮಕ್ಕೆ ಚಿತ್ತಶುದ್ಧಿಯು ಜೊತೆಯಾದಾಗಲೇ ವಿಕರ್ಮ.

'ನಿಷ್ಕಾಮ ಕರ್ಮ' ಶಬ್ಧಪ್ರಯೋಗದಲ್ಲಿ ಕರ್ಮಕ್ಕಿಂತಲೂ ನಿಷ್ಕಾಮ ಶಬ್ಧಕ್ಕೇ ಹೆಚ್ಚು ಮಹತ್ವ. 'ಅಹಿಂಸಾತ್ಮಕ ಅಸಹಕಾರ'ದಲ್ಲಿ ಅಸಹಕಾರಕ್ಕಿಂತ ಅಹಿಂಸಾತ್ಮಕ ಎಂಬುದೇ ಮುಖ್ಯ. ಅದರಲ್ಲಿ ಅಹಿಂಸಾತ್ಮಕ ಎಂಬುದನ್ನು ಕಳೆದು ಬರೀ ಅಸಹಕಾರವನ್ನು ಹಿಡಿದರೆ ಅದು ಭಯಾನಕವಾದೀತು. ಹೀಗೆಯೇ ಸ್ವಧರ್ಮಾಚರಣೆಯ ಕರ್ಮ ಮಾಡುವಾಗ ಮನಸ್ಸಿನಲ್ಲಿ ವಿಕರ್ಮವಿರದಿದ್ದರೆ ಅದು ಮೋಸ.

ಇಂದು ಸಾರ್ವಜನಿಕ ಸೇವೆ ಮಾಡುವವರು ಸ್ವಧರ್ಮವನ್ನೇ ಆಚರಿಸುತ್ತಿದ್ದಾರೆ. ಜನ ಬಡವರೂ, ದುಃಖಿಗಳೂ ಆಗಿರುವ ಅವರ ಸೇವೆಮಾಡಿ ಅವರಿಗೆ ಸುಖ ತರವುದು ಅದರ ಸಹಜಪ್ರಾಪ್ತ ಧರ್ಮ. ಆದರೆ ಹಾಗೆಂದ ಮಾತ್ರಕ್ಕೆ ಸಾರ್ವಜನಿಕ ಸೇವಕರನ್ನ ಕರ್ಮಯೋಗಿಗಳೆನ್ನಲಾಗದು. ಲೋಕಸೇವೆ ಮಾಡುವವನ ಮನಸ್ಸಿನಲ್ಲಿ ಶುದ್ಧ ಭಾವನೆಯಿಲ್ಲದಿದ್ದರೆ ಆ ಸೇವೆ ಭಯಾನಕವಾದೀತು. ನಮ್ಮ ಕುಟುಂಬ ಸೇವೆ ಮಾಡುವಾಗ ನಾವು ಎಷ್ಟು ಗರ್ವ, ಎಷ್ಟು ದ್ವೇಷ-ಮತ್ಸರ, ಎಷ್ಟು ಸ್ವಾರ್ಥ ಕಟ್ಟಿಕೊಳ್ಳುತ್ತೇವೋ ಲೋಕಸೇವೆಯಲ್ಲೂ ಅಷ್ಟೇ ಇದೆ. ಇವೊತ್ತು ಲೋಕಸೇವಕರ ಗುಂಪಿನಲ್ಲಿ ಇದೇ ಕಾಣುತ್ತದೆ.

ಕರ್ಮಕ್ಕೆ ಮನಸ್ಸನ್ನು ಜೊತೆಮಾಡಭೇಕು. ಮನಸ್ಸಿನ ಈ ಮೇಳನವನ್ನೇ ಗೀತೆ ವಿಕರ್ಮವೆನ್ನುತ್ತದೆ. ಹೊರಗೆ ಸಾದಾ ಕರ್ಮ, ಒಳಗೆ ಈ ವಿಶೇಷ ಕರ್ಮ. ಅವರವರ ಮನಸ್ಸಿನ ಅಗತ್ಯದಂತೆ ಈ ವಿಶೇಷ ಕರ್ಮ ಬೇರೆ ಬೇರೆ ಇರುತ್ತದೆ. ವಿಕರ್ಮದ ಇಂಥ ನಾನಾ ಪ್ರಕಾರಗಳನ್ನು ಉದಾಹರಣೆಗಾಗಿ ನಾಲ್ಕನೇ ಅಧ್ಯಾಯದಲ್ಲಿ ಹೇಳಿದೆ. ಆರನೇ ಅಧ್ಯಾಯದಲ್ಲಿ ಇದನ್ನೇ

ವಿಸ್ತರಿಸಲಾಗಿದೆ. ಈ ವಿಶೇಷ ಕರ್ಮವನ್ನು, ಈ ಮನಸ್ಸಿನ ಅನುಸಂಧಾನವನ್ನು ಜೋಡಿಸಿದಾಗ ನಿಷ್ಕಾಮದ ಕುಡಿ ಬೆಳಗುತ್ತದೆ. ಕರ್ಮ ಮತ್ತು ವಿಕರ್ಮಗಳು ಕೂಡಿದರೆ ಮೆಲ್ಲಮೆಲ್ಲನೆ ನಿಷ್ಕಾಮ ವೃತ್ತಿ ಒಳಗೆ ಮೂಡುತ್ತದೆ. ಮೈ ಮತ್ತು ಮನಸ್ಸು ಬೇರೆ ಬೇರೆ ವಸ್ತುಗಳಾಗಿದ್ದರೆ ಅವುಗಳ ಸಾಧನಾಕ್ರಮ ಬೇರೆ ಬೇರೆ ಆಗುತ್ತಿತ್ತು. ಎರಡೂ ಒಟ್ಟುಗೂಡಿದರೆ ಮಾತ್ರ ಗುರಿ ಕೈಗೂಡುತ್ತದೆ. ಮನ ಒತ್ತಟ್ಟಿಗೆ, ಮೈ ಬೇರೆ ಕಡೆ ಆಗಬಾರದೆಂದೇ ಶಾಸ್ತ್ರಕಾರರು ದ್ವಿಮುಖ ಮಾರ್ಗವನ್ನು ಸೂಚಿಸಿದ್ದಾರೆ. ಭಕ್ತಿಮಾರ್ಗದಲ್ಲಿ ಹೊರಗೆ ತಪಸ್ಸನ್ನು ಹೇಳಿದರೆ ಒಳಗೆ ಜಪವನ್ನು ಸೂಚಿಸಿದಾರೆ. ಹೊರಗೆ ಉಪವಾಸಾದಿ ತಪಸ್ಸು ನಡೆದಾಗ ಒಳಗೆ ಮಾನಸಿಕ ಜಪ ನಡೆಯದಿದ್ದರೆ ಆ ಎಲ್ಲ ತಪ ವ್ಯರ್ಥವಾಗುತ್ತದೆ. ತಪಸ್ಸನ್ನು ಪ್ರೇರೆಪಿಸಿದ ಭಾವನೆ ಒಗಳಗೆಲ್ಲಾ ತುಂಬಿಕೊಂಡಿರಬೇಕು ಉಪವಾಸವೆಂದರೇನೇ ದೇವರ ಇದಿರಿಗೆ ಕೂಡುವುದು. ಪರಮೇಶ್ವರನಲ್ಲಿ ಚಿತ್ತವಿರಲಿ ಎಂದು ಹೊರಗಣ ಭೋಗದ ಬಾಗಿಲನ್ನು ಮುಚ್ಚಬೇಕು. ಹೊರಗಣ ಭೋಗವನ್ನು ನಿಲ್ಲಿಸಿ ಒಳಗೆ ಮನಸ್ಸಿನಲ್ಲಿ ದೈವಚಿಂತನವಿಲ್ಲದಿದ್ದರೆ ಈ ಹೊರಗಣ ಉಪವಾಸಕ್ಕೆ ಏನು ಬೆಲೆ? ಈಶ್ವರ ಚಿಂತನೆಮಾಡದೆ ಮನಸ್ಸಿನಲ್ಲಿ ತಿಂಡಿಯ ಚಿಂತೆ ನಡೆಸಿದರೆ ಭಾರಿ ಸಂತರ್ಪಣೆಯೇ ಆದಂತೆ. ಮನಸ್ಸಿನೊಳಗೇ ನಡೆದ ಈ ಊಟಕ್ಕಿಂತ, ಈ ವಿಷಯ ಚಿಂತನೆಗಿಂತ ಭಯಂಕರ ವಸ್ತು ಮತ್ತೊಂದಿಲ್ಲ. ತಂತ್ರದೊಡನೆ ಮಂತ್ರವೂ ಬೇಕು. ಬರೀ ಹೊರಗಣ ತಂತ್ರಕ್ಕೆ ಬೆಲೆಯಿಲ್ಲ. ಕರ್ಮವಿಲ್ಲದ ಮಂತ್ರಕ್ಕೂ ಬೆಲೆಯಿಲ್ಲ, ಕ್ರಿಯೆಯಲ್ಲೂ ಸೇವೆ, ಹೃದಯದಲ್ಲೂ ಸೇವೆ ಬೇಕು. ಆಗಲೇ ಮಾಡುವ ಕ್ರಿಯೆಯಿಂದ ನಿಜವಾದ ಸೇವೆಯಾದೀತು.

ಹೃದಯದೊಳಗಿನ ಸ್ಫೂರ್ತಿರಸ ಬಾಹ್ಯಾಚರಣೆಯಲ್ಲಿ ಹರಿದುಬಾರದಿದ್ದರೆ ಸ್ವಧರ್ಮಾಚರಣೆ ಶುಷ್ಕವಾದೀತು. ಅದು ನಿಷ್ಕಾಮದ ಹಣ್ಣು, ಹೂ, ಬಿಡಲಿಕ್ಕಿಲ್ಲ. ನಾವು ರೋಗಿಗಳ ಆರೈಕೆ ಮಾಡಬಹುದು. ಅದರಲ್ಲಿ ಮೆದುವಾದ ಕನಿಕರ ಭಾವವಿರದಿದ್ದರೆ ಆ ಆರೈಕೆ ನೀರಸವೂ ಬೇಸರದ್ದೂ ಆಗುತ್ತದೆ, ಅದೊಂದು ಭಾರವೇ ಆಗುತ್ತದೆ. ರೋಗಿಗೂ ಆ ಸೇವೆ ಭಾರವಾದೀತು. ಶುಶ್ರೂಷೆಯಲ್ಲಿ ಮನಸ್ಸಿನ ಸಹಕಾರವಿರದಿದ್ದರೆ ಅದರಿಂದ ಅಹಂಕಾರ ಹುಟ್ಟೀತು. ಇವೊತ್ತು ನಾನು ಅವನಿಗೆ ಆಗಿದ್ದೇನೆ: ನಾಳೆ ನನಗೆ ಅವನು ಆಗಲಿ, ಅವನು ನನ್ನ ಸ್ತುತಿಮಾಡಲಿ ಎಂಬ ಯೋಚನೆ ಹುಟ್ಟಿಯಾವು. ಇಷ್ಟು ಸೇವೆ ಮಾಡಿದರೂ ಈ ರೋಗಿ ಸಿಡಿಮಿಡಿಗೊಳ್ಳುತ್ತಾನೆಂದು ನಮಗೆ ತ್ರಾಸಾದೀತು. ರೋಗಿಗೆ ಸಹಜವಾಗಿಯೇ ಸಿಡಿಮಿಡಿ. ಮನಸ್ಸಿನಲ್ಲಿ ಸೇವಾಭಾವನೆ ಇಲ್ಲದವನಿಗೆ ಆ ಸಿಡಿಮಿಡಿ ಬೇಸರವಾದೀತು.

ಕರ್ಮಕ್ಕೆ ಅಂತರಂಗ ಮೇಳವಿಸಿದರೆ ಆ ಕರ್ಮ ವಿಶಿಷ್ಟವಾಗುತ್ತದೆ.

ಎಣ್ಣೆ ಮತ್ತು ಬತ್ತಿಗಳ ಜೊತೆ ಜ್ಯೋತಿ ಸೇರಿದರೆ ಬೆಳಕಾದೀತು. ಹಾಗೆಯೇ ಕರ್ಮಕ್ಕೆ ವಿಕರ್ಮ ಜೊತೆಯಾದರೆ ಮಾತ್ರ ನಿಷ್ಕಾಮ ಭಾವ ಬರುತ್ತದೆ. ಸಿಡಿಮದ್ದಿಗೆ ಬೆಂಕಿಯಿಟ್ಟರೆ ಸ್ಫೋಟವಾಗುತ್ತದೆ. ಅದರಲ್ಲಿ ಶಕ್ತಿ ನಿರ್ಮಾಣವಾಗುತ್ತದೆ. ಕರ್ಮ ಬಂದೂಕಿನ ಸಿಡಿಮದ್ದಿನಂತೆ. ಅದಕ್ಕೆ ವಿಕರ್ಮದ ಬೆಂಕಿ ಹತ್ತಿದರೆ ಕೆಲಸವಾಗುತ್ತದೆ. ವಿಕರ್ಮ ಜೊತೆಗೂಡದಿರುವ ತನಕ ಕರ್ಮ ಬರೀ ಜಡ, ಆದರೆ ಕರ್ಮದ ಕಿಡಿಯಲಿ ವಿಕರ್ಮ ಬಿದ್ದರೆ ಆ ಕರ್ಮದಲ್ಲಿ ಹುಟ್ಟಿಬರುವ ಸಾಮರ್ಥ್ಯ ಅವರ್ಣನೀಯ. ಸಿಡಿಮದ್ದು ಕಿಸೆಯಲ್ಲಿದ್ದೀತು, ಆಡಲು ಬಂದೀತು. ಕೊಂಚ ಬೆಂಕಿ ತಗಲಿತೋ ಶರೀರ ಛಿದ್ರ ಛಿದ್ರವಾದೀತು. ಸ್ವಧರ್ಮಾಚರಣೆಯಲ್ಲಿ ಅನಂತ ಸಾಮರ್ಥ್ಯ ಗುಪ್ತವಾಗಿರುತ್ತದೆ. ಅದಕ್ಕೆ ವಿಕರ್ಮವನ್ನು ಜೋಡಿಸಿ ನೋಡು. ಎಂಥ ಕ್ರಾಂತಿಯಾಗುತ್ತದೆ! ಅಹಂಕಾರ ಕಾಮಕ್ರೋಧಗಳನ್ನು ಈ ಸ್ಫೋಟನ ನಿರ್ನಾಮ ಮಾಡುತ್ತದೆ; ಪರಮಜ್ಞಾನದ ಉತ್ಪತ್ತಿಯಾಗುತ್ತದೆ.

ಜ್ಞಾನಕ್ಕೆ ಕರ್ಮವು ಉರವಲಿದ್ದಂತೆ. ಸುಮ್ಮನೆ ಒಂದು ಕಟ್ಟಿಗೆ ಬಿದ್ದಿರುತ್ತದೆ. ಅದನ್ನು ಹೊತ್ತಿಸಿ, ಅದು ಧಗಧಗ ಉರಿಯುತ್ತದೆ. ಆ ಕಟ್ಟಿಗೆ, ಈ ಬೆಂಕಿ – ಎಷ್ಟು ಭೇದ! ಆ ಕಟ್ಟಿಗೆಯೆದೆ ತಾನೆ ಈ ಬೆಂಕಿ, ಕರ್ಮದಲ್ಲಿ ವಿಕರ್ಮವನ್ನು ತುಂಬಿದರೆ ಆ ಕರ್ಮ ದಿವ್ಯವಾಗಿ ಕಾಣುತ್ತದೆ. ತಾಯಿ ಮಗನ ಬೆನ್ನನ್ನು ಸವರುತ್ತಾಳೆ, ಒಂದು ಕೈ ಒಂದು ಬೆನ್ನು ಸವರಿದರೆ ಅದರಲ್ಲೇನಿದೆ? ಆದರೆ ಈ ಸಾಮಾನ್ಯ ಕರ್ಮದಿಂದ ಆ ತಾಯಿ ಮಕ್ಕಳ ಮನಸ್ಸಿನಲ್ಲೆದ್ದ ಭಾವನೆಯನ್ನು ಬಣ್ಣಿಸಬಲ್ಲವರಾರು? ಇಷ್ಟು ಅಡ್ಡಗಲದ ಬೆನ್ನಿನ್ನ ಮೇಲೆ ಇಷ್ಟು ಭಾರದ ನುಣುಪು ಕೈ ಆಡಿಸಿದರೆ ಆನಂದವಾಗುತ್ತದೆಂದು ಯಾರಾದರು ಸಮೀಕರಣ ಮಾಡಿದರೆ ನಗೆಗೀಡಾದೀತು. ಕೈಯಾಡಿಸಿದರೆ ಈ ಕ್ರಿಯೆ ತೀರಾ ಕ್ಷುದ್ರ. ಆದರೆ ಆ ಕ್ರಿಯೆಯಲ್ಲಿ ತಾಯಿಯ ಹೃದಯ ತುಂಬಿ ತುಳುಕಿದೆ. ಅಲ್ಲಿ ವಿಕರ್ಮ ತುಂಬಿದೆ. ಅದರಿಂದ ಅಪೂರ್ವ ಆನಂದ ಸಿಗುತ್ತದೆ. ತುಲಸಿ ರಾಮಾಯಣದಲ್ಲಿ ಒಂದು ಸಂಗತಿ ಇದೆ. ರಾಕ್ಷಸರೊಡನೆ ಯುದ್ಧಮಾಡಿ ಬರುತ್ತಾರೆ ವಾನರರು. ಅವರಿಗೆ ಗಾಯಗಳಾಗಿವೆ, ಮೈಯಲ್ಲಿ ನೆತ್ತರು ಸುರುಯುತ್ತಿದೆ ಪ್ರಭುರಾಮಚಂದ್ರ ಅವರ ಕಡೆ ಒಮ್ಮೆ ಪ್ರೇಮದೃಷ್ಟಿ ಬೀರಿದನೋ ಇಲ್ಲವೋ ಅವರ ನೋವು ಮಾಯವಾಯಿತು. ಆಗ ರಾಮಚಂದ್ರ ಹೇಗೆ ಕಣ್ಣು ಅರಳಿಸಿದ್ದನೋ ಅದೇ ರೀತಿ ಯಾರಾದರೂ ನಕಲು ಮಾಡಿ ಕಣ್ಣು ಅರಳಿಸಿದರೆ ಅದೇ ಪರಿಣಾಮ ವಾಗುತ್ತಿತ್ತೆ.? ಆ ಪ್ರಯತ್ನ ಹಾಸ್ಯಾಸ್ಪದ. ಕರ್ಮಕ್ಕೆ ವಿಕರ್ಮ ಜೊತೆಯಾದರೆ ಅದರಲ್ಲಿ ಶಕ್ತಿ ಸ್ಫೋಟನವಾಗುತ್ತದೆ, ಅಕರ್ಮ ನಿರ್ಮಾಣವಾಗುತ್ತದೆ. ಸುಟ್ಟರೆ ಕಟ್ಟಿಗೆ ಬೂದಿಯಾಗುತ್ತದೆ. ಭಾರಿ

ಕೊರಡೆಲ್ಲ ಒಂದು ಹಿಡಿ ನಿರುಪದ್ರವಿ ಬೂದಿಯಾಗುತ್ತದೆ. ಅದನ್ನು ಕೈಯಲ್ಲಿ ತೆಗೆದುಕೊಂಡು ಮೈಗೆ ಬಳಿದುಕೊಳ್ಳಬಹುದು. ಕರ್ಮದಲ್ಲಿ ವಿಕರ್ಮದ ಜ್ಯೋತಿ ಹತ್ತಿಸಿದರೆ ಅಕರ್ಮವಾಗುತ್ತದೆ. ಮರವೆಲ್ಲಿ, ಬೂದಿಯೆಲ್ಲಿ? ಕಃ ಕೇನ ಸಂಬಂಧಃ ? ಇವುಗಳ ಗುಣಧರ್ಮಗಳಲ್ಲಿ ಏನೂ ಸಾಮ್ಯವಿಲ್ಲ. ಆದರೂ ಆ ಬೂದಿ ಆ ಮರದ್ದೇ; ಅದರಲ್ಲಿ ಸಂಶಯವಿಲ್ಲ.

ಕರ್ಮದಲ್ಲಿ ವಿಕರ್ಮ ಬೆರೆತರೆ ಅಕರ್ಮವಾದೀತು ಎಂದರೇನರ್ಥ? ಕರ್ಮ ಮಾಡಿದಂತೆಯೇ ಎನಿಸದು ಎಂದರ್ಥ. ಆ ಕರ್ಮದ ಭಾರ ಕಾಣದು. ಮಾಡಿಯೂ ಮಾಡಿದವನಂತೆ ಇರುತ್ತಾನೆ. ಗೀತೆ ಹೇಳುತ್ತದೆ: ಕೊಂದರೂ ನೀನು ಕೊಂದ ಹಾಗಲ್ಲ. ತಾಯಿ ಮಗುವನ್ನು ಹೊಡೆಯುತ್ತಾಳೆಂದು ನೀನು ಹೊಡೆದರೆ? ಅದನ್ನು ಮಗು ಸಹಿಸಲಿಕ್ಕಿಲ್ಲ. ತಾಯಿ ಹೊಡೆದರೂ ಅವಳ ಮಡಿಲಲ್ಲೇ ಮೋರೆ ಮುಚ್ಚಿಕೊಂಡೀತು. ತಾಯಿಯ ಬಾಹ್ಯ ಕರ್ಮದಲ್ಲಿ ಚಿತ್ತಶುದ್ಧಿಯಿದೆ. ಆಕೆಯ ಆ ಹೊಡೆತ ನಿಷ್ಕಾಮದ್ದು. ಅದರಲ್ಲಿ ಆಕೆಗೇನು ಸ್ವಾರ್ಥವಿಲ್ಲ. ವಿಕರ್ಮದಿಂದ, ಮನಶ್ಶುದ್ಧಿಯಿಂದ ಕರ್ಮದ ಕರ್ಮತೆ ಹಾರಿಹೊಗುತ್ತದೆ. ರಾಮನ ಆ ನೋಟ ಒಳಗಿನ ವಿಕರ್ಮದಿಂದ ಪ್ರೇಮ ಸುಧಾಸಾಗರವಾಯಿತು. ರಾಮನಿಗೆ ಆ ಕರ್ಮದಲ್ಲಿ ಶ್ರಮವೇನು ಇಲ್ಲ. ಚಿತ್ತಶ್ಯುದ್ಧಿಯಿಂದ ಮಾಡಿದ ಕರ್ಮ ನಿರ್ಲೇಪವಾಗಿರುತ್ತದೆ ಅದಕ್ಕೆ ಪಾಪ - ಪುಣ್ಯ ಯಾವುದೂ ಅಂಟದು.

ಕರ್ಮದ ಒಳಿತು - ಕೆಡಕಿನಿಂದ ನಾವು ಬಹಳ ವ್ಯಗ್ರರಾಗುತ್ತೇವೆ. ಕರ್ಮ ನಮ್ಮನ್ನು ಎಲ್ಲ ಕಡೆಗಳಿಂದಲೂ ಗುತ್ತುತ್ತಿದೆ ಕರ್ಮ ನಮ್ಮ ಕತ್ತಿನಮೇಲೆ ಕೂತು ಸವಾರಿ ಮಾಡುತ್ತದೆ. ಕಡಲನೀರು ಉಕ್ಕಿಬಂದು ನೆಲವನ್ನು ಕೊಚ್ಚಿ ಆಖಾತ ಮಾಡುವಂತೆ, ಕರ್ಮ ಚಿತ್ತದೊಳಗೆ ನುಗ್ಗಿ, ಅಲ್ಲಿ ಕ್ಷೋಭೆಯುಂಟುಮಾಡುತ್ತದೆ ಅದರಿಂದ ಸುಖ ದುಃಖದ ದ್ವಂದ್ವ ಹುಟ್ಟುತ್ತದೆ, ಶಾಂತಿಯೆಲ್ಲ ನಷ್ಟವಾಗುತ್ತದೆ, ಕರ್ಮ ಮುಗಿದು ಹೋದರೂ ಅದರ ವೇಗವಿನ್ನೂ ಉಳಿದೇ ಇರುತ್ತದೆ. ಕರ್ಮ ಚಿತ್ತವನ್ನು ಸ್ವಾದೀನಪಡಿಸಿಕೊಳುತ್ತದೆ. ಆ ಮೇಲೆ ಅದಕ್ಕೆ ನಿದ್ದೆಯೇ ಇಲ್ಲ.

ಆದ್ದರಿಂದ ಕರ್ಮದಲ್ಲೂ ವಿಕರ್ಮ ಬೆರೆತರೆ ಸಾಕು, ಆಗ ಎಷ್ಟು ಕರ್ಮ ಮಾಡಿದರೂ ಭಾರ, ಶ್ರಮ ಎನಿಸದು. ಮನಸ್ಸು ಧ್ರುವದಂತೆ ಶಾಂತ, ಸ್ಥಿರ, ತೇಜೋಮಯ ಆಗಿರುತ್ತದೆ. ಕರ್ಮದಲ್ಲಿ ವಿಕರ್ಮ ತುಂಬಿದಾಗ ಅದು ಅಕರ್ಮವಾಗುತ್ತದೆ. ಕರ್ಮಮಾಡಿದರೂ ಅದು ಅಳಿಸಿಹಾಕಿದಂತೆ ಆಗುತ್ತದೆ.

ಗಾಂಧಿಯನ್ನು ಮಿಸ್ ಮಾಡಿಕೊಂಡ ನೊಬೆಲ್ ಬಹುಮಾನ

– ಡಾ॥ ಚನ್ನೇಶ್ ಟಿ ಎಸ್

ಗಾಂಧಿ ಜಯಂತಿಯೊಂದಿಗೆ ಅಕ್ಟೋಬರ್ ತಿಂಗಳು ಆರಂಭವಾಗುತ್ತದೆ. ಅದೇ ಸಮಯಕ್ಕೆ ಸರಿಯಾಗೇ ನೊಬೆಲ್ ಬಹುಮಾನಗಳೂ ಘೋಷಿಸಲ್ಪಡುತ್ತವೆ. ನೊಬೆಲ್ ಬಹುಮಾನಕ್ಕೂ ವಿಜ್ಞಾನಕ್ಕೂ ಬಹಳ ದೊಡ್ಡ ನಂಟು. ವಿಜ್ಞಾನದಲ್ಲಿ ಮಹತ್ವದ ಸಾಧನೆ ಎಂಬುದನ್ನು ನೊಬೆಲ್ ಸಾಬೀತು ಮಾಡುತ್ತದೆ. ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ/ವೈದ್ಯಕೀಯ ಜೊತೆಯಲ್ಲಿ ಸಾಹಿತ್ಯ, ಶಾಂತಿ ಹಾಗೂ ಅರ್ಥಶಾಸ್ತ್ರದ ಬಹುಮಾನಗಳೂ ನೊಬೆಲ್ ಸಮಿತಿಯಿಂದ ಕೊಡಲ್ಪಟ್ಟು ಜಾಗತಿಕವಾಗಿ ದೊಡ್ಡ ಸುದ್ದಿಯನ್ನು ಮಾಡುತ್ತವೆ. ನೊಬೆಲ್ ಬಹುಮಾನವೆಂಬುದು ವೈಜ್ಞಾನಿಕ ಜಗತ್ತಿನಲ್ಲಿ ಬಹಳ ದೊಡ್ಡ ಕಿರೀಟ. ಅದು ಕೇವಲ ವೈಜ್ಞಾನಿಕ ಸಾಧನೆ ಮಾತ್ರವಲ್ಲ. ಆಯಾ ಕ್ಷೇತ್ರದಲ್ಲಿ ಆ ವಿಜ್ಞಾನಿಯ ಆತ್ಯಂತಿಕ ಮಾನವತೆಯ ಕೊಡುಗೆ ಎಂಬುದನ್ನೂ ಪರಿಗಣಿಸಲಾಗಿರುತ್ತದೆ. ಅಕ್ಟೋಬರ್ ೩ ರಿಂದ ೧೦ರ ಒಳಗೆ ಸಾಮಾನ್ಯವಾಗಿ ನೊಬೆಲ್ ಸಮಿತಿಯು ಬಹುಮಾನಗಳನ್ನು ಬಿಡುಗಡೆ ಮಾಡುತ್ತದೆ. ಗಾಂಧೀಜಿಯವರು ಅಹಿಂಸೆ ಮತ್ತು ಶಾಂತಿಗಾಗಿ ನಡೆಸಿದ ಹೋರಾಟ ಮತ್ತು ಚಳುವಳಿಗಳಿಂದ ಹೆಸರಾಗಿದ್ದರೂ ಅವರಿಗೇಕೆ ನೊಬೆಲ್ ಶಾಂತಿ ಬಹುಮಾನ ಬರಲಿಲ್ಲ?

ಜಾಗತಿಕವಾಗಿ ಈ ಪ್ರಶ್ನೆಯನ್ನು ಅನೇಕ ಸಲ ಕೇಳಲಾಗಿದೆ. ಜಗತ್ತಿಗೆ ಶಾಂತಿ ಮತ್ತು ಅಹಿಂಸೆಯ ತತ್ವವನ್ನೂ, ಅನುಸರಣೆಯ ಮಾರ್ಗಗಳನ್ನೂ ತೋರಿಸಿದ ಮಹಾತ್ಮ – ಗಾಂಧೀಜಿ. ಇಪ್ಪತ್ತನೇ ಶತಮಾನದ ಶಾಂತಿ ಮತ್ತು ಅಹಿಂಸಾ ಸಾಧನದ ಶಿಲ್ಪಿ. ಶಾಂತಿ ಪ್ರಿಯತೆಯನ್ನು ಜಗತ್ತಿಗೇ ಸಾರಿ ತೋರಿದ ಗಾಂಧಿಗೆ ನೊಬೆಲ್ ಶಾಂತಿ ಪುರಸ್ಕಾರ ತಪ್ಪಿದ್ದು ಮಾತ್ರ ವಿಚಿತ್ರವಾದ ಸಂಗತಿ. ಅನೇಕ ಬಾರಿ ಗಾಂಧಿಯ ಹೆಸರನ್ನು ಶಾಂತಿ ಪುರಸ್ಕಾರಕ್ಕೆ ಹೆಸರಿಸಿದ್ದರೂ ನೊಬೆಲ್ ಕಮಿಟಿಯವರು ಅದನ್ನು ಪರಿಗಣಿಸಲೇ ಇಲ್ಲ. ಏಕೆ ಹೀಗೆ? ಕಮಿಟಿಯವರು ಅಷ್ಟು ಕೆಳ ಮನಸ್ಸಿನ ಚಿಂತಕರೇ? ಅವರಿಗೆ ಐರೋಪ್ಯರಲ್ಲದ ವ್ಯಕ್ತಿಯ ಸಾಧನೆಗಳ ಬಗೆಗೆ ತಾತ್ಸಾರವೇ? ಅಥವಾ ನಾರ್ವೆ ದೇಶದವರಿಗೆ ತಮ್ಮ ನೆರೆಯ ಐರೋಪ್ಯ ಕುಟುಂಬದ ಬ್ರಿಟನ್ ದೇಶದ ವಿರುದ್ಧ ಹೋರಾಟದ ದನಿಯನ್ನು ಪುರಸ್ಕರಿಸಿದಂತಾಗುವ ಭಯವೇ?

ಗಾಂಧಿಯ ಹೆಸರನ್ನು ೧೯೩೭, ೧೯೩೮, ೧೯೩೯ ಮತ್ತು ೧೯೪೭ರಲ್ಲಿ ಹಾಗೂ ಕೊನೆಯ ಬಾರಿ ೧೯೪೮ರಲ್ಲಿ ಹತ್ತೆಗೀಡಾಗುವ ಕೆಲವೇ ದಿನಗಳ ಮುನ್ನವೂ ಸೂಚಿಸಲಾಗಿತ್ತು. ಎಲ್ಲಾ ಸಂಧರ್ಭದಲ್ಲೂ ಅವರಿಗೆ ಬಹುಮಾನವನ್ನು ನಿರಾಕರಿಸಲಾಗಿದೆ. ಮುಂದೆ ೧೯೮೯ ರಲ್ಲಿ ದಾಲಾಯ್ ಲಾಮ ಅವರಿಗೆ ನೊಬೆಲ್ ಶಾಂತಿ ಪಾರಿತೋಷಕ ನೀಡಿದಾಗ, ಆಯ್ಕೆ ಸಮಿತಿಯ ಅಧ್ಯಕ್ಷರು ಇದು ಒಂದು ರೀತಿಯಲ್ಲಿ ಮಹಾತ್ಮಾ ಗಾಂಧಿ ಅವರ ನೆನಪಿಗೆ ತೋರುವ ಗೌರವವೆಂದೂ ಹೇಳಿದರು. ಅನಂತರದಲ್ಲಿ ಕೆಲ

ಸದಸ್ಯರು ಗಾಂಧಿಯ ಹೆಸರು ಬಿಟ್ಟುಹೋದದಕ್ಕೆ ಸಾರ್ವಜನಿಕವಾಗಿಯೇ ಪಶ್ಚಾತ್ತಾಪ ತೋರಿದ್ದಾರೆ. ಆದರೂ ಕಮಿಟಿಯವರಿಂದ ತೀರ ಇತ್ತೀಚೆಗಿನವರೆಗೂ ಗಾಂಧಿಗೆ ಕೊಡದೇ ಹೋದದ್ದಕ್ಕಾಗಿ ಯಾವುದೇ ಕಾರಣಗಳ ಕೊಟ್ಟಿರಲೂ ಇಲ್ಲ. ಅಂತಹ ವಿಚಾರಗಳ ಕುರಿತು ಮಾಹಿತಿಯೂ ಲಭ್ಯವಿರಲಿಲ್ಲ. ಇತ್ತೀಚೆಗಷ್ಟೇ ನೊಬೆಲ್ ಸಮಿತಿಯು ಈ ಕುರಿತು ಪ್ರಕಟಿಸಿದೆ.

ಗಾಂಧಿಯ ಕುರಿತ ಅನೇಕ ವಿಚಾರಗಳು ಮತ್ತೆ ಮತ್ತೆ ಕಾಡುತ್ತವೆ. ಗಾಂಧಿಯ ವೈರುಧ್ಯಗಳ ಬಗೆಗೂ ಅಹಿಂಸೆಯೊಳಗಣ ಹಿಂಸೆಯ ಬಗೆಗೂ ಸಾಕಷ್ಟು ಚರ್ಚೆಗಳಾಗಿವೆ. ಹಾಗೆಯೇ ಗಾಂಧಿಯ ಗೌರವಯುತ ನೆನಪುಗಳ ಬಗೆಗೂ ವರ್ಷದಿಂದ ವರ್ಷಕ್ಕೆ ದಾಖಲೆಗಳ ಪ್ರಕಟಣೆಗಳು ಸಿದ್ಧವಾಗುತ್ತವೆ. ಇತ್ತೀಚೆಗೆ "ಭಾರತದ ರಾಷ್ಟ್ರಪಿತ" ಎಂದು ಸಂವಿಧಾನಿಕವಾಗ ಕರೆದ ಗೌರವವೇ ಎಂಬುದಕ್ಕೆ ಮಾಹಿತಿ ಹಕ್ಕಿನಡಿ ಪಡೆದ ಸಂಗತಿಯಲ್ಲೂ, ಸರ್ಕಾರದ ದಾಖಲೆಗಳಾಗಿ ಏನೂ ಸಿಗಲಿಲ್ಲ. ಇಷ್ಟೆಲ್ಲಾ ಆದರು ಗಾಂಧಿಯ ಗೌರವಕ್ಕೆ ಯಾವುದೇ ಚ್ಯುತಿ ಬಂದಿಲ್ಲ. ಗಾಂಧಿ ನಿರಂತರವಾಗಿ ಜನ ಮನದಲ್ಲಿ ಉಳಿದ ಮಾಹಾ ಮಾನವ. "ರಕ್ತ ಮಾಂಸಗಳಿಂದಾದ ಶರೀರದ ವ್ಯಕ್ತಿಯೊಬ್ಬ ಈ ನೆಲದ ಮೇಲೆ ಓಡಾಡಿದ್ದ ಎಂಬ ನಂಬಿಕೆಯೇ ಅತ್ಯಾಶ್ಚರ್ಯ" ಎಂದು ಮಹಾನ್ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಹೇಳಿದ್ದರು. ಗಾಂಧಿಯನ್ನು ಜೈಲಿಗಟ್ಟಿದ ಬ್ರಿಟೀಷ್ ನ್ಯಾಯಾಧೀಶರೂ ಸಹಾ ಗಾಂಧಿಯಲ್ಲಿ ಮಹಾಮಾನವನನ್ನು ಕಂಡಿದ್ದಾರೆ, ಕೊಂಡಾಡಿದ್ದಾರೆ. ಗಾಂಧಿಯ ಅಹಿಂಸೆಯ ಛಾಟಿ ಎಂತಹ ಶಕ್ತಿಯುತ ಎಂದರೆ ಭೂಮಂಡಲವನ್ನೆಲ್ಲಾ ವ್ಯಾಪಿಸಿದ್ದ ಬ್ರಿಟೀಷರ ಆಡಳಿತಕ್ಕೂ ಅದನ್ನು ತಡೆದುಕೊಳ್ಳುವ ಶಕ್ತಿ ಇರಲಿಲ್ಲ. ಎಷ್ಟೆಲ್ಲಾ ಆದರೂ ಗಾಂಧಿಗೇಕೆ ಶಾಂತಿ ಪುರಸ್ಕಾರ ಕೊಡಲಿಲ್ಲ? ಗಾಂಧಿಯ ಹುಟ್ಟಿದ ಹಬ್ಬಕ್ಕೂ, ಮತ್ತು ನೊಬೆಲ್ ಪುರಸ್ಕಾರಗಳ ಪ್ರಕಟಣೆಗೂ ಸಾಕ್ಷಿಯಾಗುವ ಅಕ್ಟೋಬರ್ ಸಂದರ್ಭದಲ್ಲಿ ಒಂದಷ್ಟು.

೧೯೩೦ರ ದಶಕದಲ್ಲಿ ಗಾಂಧಿಪರ ಸಂಘಟನೆಗಳು "ಭಾರತದ ಗೆಳೆಯರು" ಎಂಬ ಹೆಸರಲ್ಲಿ ಒಟ್ಟಾಗಿ ಯೂರೋಪ್ ಹಾಗೂ ಅಮೇರಿಕಾದ್ಯಂತ ಸುದ್ದಿ ಮಾಡಿದರು. ಅವರಲ್ಲಿ ಕೆಲವರು ಗಾಂಧಿಯ ಧರ್ಮಶ್ರದ್ಧೆಯನ್ನು ಮೆಚ್ಚಿದ್ದರೆ, ಹಲವರು ಗಾಂಧಿಯ ಅಹಿಂಸಾ ತತ್ವಕ್ಕೆ ಮಾರು ಹೋಗಿದ್ದರು. ನಾರ್ವೆಯ ಬ್ರಾಂಚಿನ "ಭಾರತದ ಗೆಳೆಯರು" ಸಂಘಟನೆಯ ಮಹಿಳೆಯೊಬ್ಬರು ಮೊಟ್ಟ ಮೊದಲ ಬಾರಿಗೆ ನೊಬೆಲ್ ಸಮಿತಿಗೆ ಗಾಂಧಿಯ ಹೆಸರನ್ನು ನಾಮಕರಣ ಮಾಡಿದರು. ಆಗ ಗಾಂಧಿಯ ಜಾಗತಿಕ ಚಳುವಳಿಗಳ ಕುರಿತ ಟೀಕೆಗಳನ್ನು ಮುಂದಿಟ್ಟುಕೊಂಡು ಸಮಿತಿಯ ಸದಸ್ಯರೊಬ್ಬರಾದ ಜಾಕೊಬ್ ಮುಲ್ಲರ್ ಮಾಡಿದ್ದ ತೀವ್ರವಾದ ವಿಮರ್ಶೆಯಿಂದಾಗಿ ಗಾಂಧಿಯನ್ನು ನೊಬೆಲ್ ಸಮಿತಿಯು ಪುರಸ್ಕರಿಸಲಿಲ್ಲ. ಅದೇ ಪರಿಸ್ಥಿತಿಯು ಮರುಕಳಿಸಿ ಮುಂದೆ ಎರಡು ವರ್ಷವೂ ತಿರಸ್ಕರಿಸಲಾಗಿತ್ತು. ಆಗೆಲ್ಲಾ ನೊಬೆಲ್ ಸಮಿತಿಯ ಸದಸ್ಯರೇ ಆಸಕ್ತಿ ವಹಿಸಿ ನಾಮಕರಣಗೊಳಿಸಿದ್ದರು. ಆದಾಗ್ಯೂ ಗಾಂಧಿಯನ್ನು ನೊಬೆಲ್ ಶಾಂತಿಯ ಬಹುಮಾನದಿಂದ ವಂಚಿಸಲಾಯಿತು. ಆಗ ಕೊಟ್ಟ ಕಾರಣಗಳು ಗಾಂಧಿಯನ್ನು ಅಹಿಂಸೆಯು ರಾಜಕೀಯ ಪ್ರೇರಿತವೆಂದೂ ಅದರಿಂದ ಬ್ರಿಟಿಷ್ ಆಡಳಿತ ಉಂಟುಮಾಡುವ

ಹಿಂಸೆಗಳಿಗೆ ಕಾರಣವಾದವೆಂದೂ, ಜೊತೆಗೆ ಗಾಂಧಿಯನ್ನು ಕೇವಲ ಧಾರ್ಮಿಕ ಸಂತನಂತೆ ಪರಿಗಣಿಸಬಹುದೇ ವಿನಾಃ, ಅಂತಾರಾಷ್ಟ್ರೀಯ ಶಾಂತಿ ಸಂಘಟನೆಯ ರುವಾರಿ ಎನ್ನಲಾಗದು ಎಂಬವಾಗಿದ್ದವು.

ಮುಂದೆ ಮತ್ತೆ ಹತ್ತು ವರ್ಷಗಳ ನಂತರ ೧೯೪೭ರಲ್ಲಿ ನಾಲ್ಕನೇ ಬಾರಿಗೆ ನಾಮಕರಣ ಮಾಡಲಾಗಿತ್ತು. ಆಗ ಗೋವಿಂದ ವಲ್ಲಭ ಪಂತ್ ಮುಂತಾದ ಮುಂದಾಳುಗಳೇ ನಾಮಕರಣ ಮಾಡಿದ್ದರು. ಆಧುನಿಕ ಭಾರತ ನಿರ್ಮಾಣವನ್ನು ಗಾಂಧಿ ಶಾಂತಿ ಮತ್ತು ಅಹಿಂಸೆಯಿಂದ ಸಾಧಿಸಿದ ವ್ಯಕ್ತಿ ಎಂದೂ ವರ್ಣಿಸಲಾಗಿತ್ತು. ಸ್ವಾತಂತ್ರ್ಯ ಸಂಗ್ರಾಮದ ಭಾಗವಾಗಿ ಹಿಂದೂ ಮುಸುಲ್ಮಾನರ ನಡುವಣ ದ್ವೇಷವನ್ನು ಭುಗಿಲೆಬ್ಬಿಸಿದ ಬ್ರಿಟೀಷರು ಅದಕ್ಕೆ ಗಾಂಧಿಯನ್ನು ಗುರಿಯಾಗಿಸಿ ಪ್ರಚಾರ ಪಡಿಸಿದ್ದ ವರದಿಗಳನ್ನು ಮುಂದು ಮಾಡಿಕೊಂಡು ಸಮಿತಿಯು ಮತ್ತೆ ಗಾಂಧಿಯನ್ನು ತಿರಸ್ಕರಿಸಿತ್ತು. ಸ್ವತಂತ್ರ ಸಮಯದ ದೇಶದ ಇಬ್ಭಾಗವು ಗಾಂಧಿಯ ಕೊಡುಗೆ ಎಂಬಂತೆ ಹೇಳಲಾಯಿತು. ೧೯೪೭ರ ಅಕ್ಟೋಬರ್ ನಲ್ಲಿ ನೊಬೆಲ್ ಸಮಿತಿಯು ಚರ್ಚಿಸಿದಂತೆ ಕೆಲ ಸದಸ್ಯರು ಗಾಂಧಿಯ ಪರವಾಗಿದ್ದರೂ, ಕೆಲವರು ಇಂಡಿಯಾ-ಪಾಕ್ ಸಂಬಂಧವನ್ನೇ ಮುಂದುಮಾಡಿ ಗಾಂಧಿಯನ್ನು ಹಿಂದಿಕ್ಕುವಲ್ಲಿ ಸಫಲರಾದರು. ಸೆಪ್ಟೆಂಬರ್ ೨೭ರ ಟೈಮ್ಸ್ ಪತ್ರಿಕೆಯು "ಪಾಕ್ ಮೇಲೆ ಯುದ್ಧದಲ್ಲಿ ಗಾಂಧಿ" ಎಂಬ ತಲೆಬರಹದಲ್ಲಿ ಮಾಡಿದ್ದ ವರದಿಯೇ ಚರ್ಚೆಯ ಮೂಲವಸ್ತುವಾಗಿತ್ತು. ಅಂತೂ ಗಾಂಧಿಗೆ ಆಗಲೂ ಬರಲಿಲ್ಲ. ಬ್ರಿಟೀಷರು ತಾವು ಮಾಡಿದ್ದ ತಪ್ಪನ್ನು ಗಾಂಧಿಗೆ ಹೋರಿಸುವಲ್ಲಿ ಸಫಲರಾಗಿದ್ದರು.

ಗಾಂಧಿಯು ೧೯೪೮ರ ಜನವರಿ ೩೦ರಂದು ಹತ್ಯೆಗೀಡಾದರು. ಅಷ್ಟೊತ್ತಿಗೆ ಎರಡು ದಿನಗಳ ಮುಂಚೆಯಷ್ಟೇ ಮತ್ತೆ ನಾಮಕರಣ ಮಾಡಲಾಗಿತ್ತು. ಹಿಂದೆ ನೊಬೆಲ್ ಬಹುಮಾನಿತರೇ ನಾಮಕರಣ ಮಾಡಿದ್ದರು. ಸಮಿತಿಗೆ ಆಗ ಉಳಿದಿರುವ ಸಂಕಷ್ಟ ಇಷ್ಟೇ. ಮರಣೋತ್ತರ ಪುರಸ್ಕಾರಕ್ಕೆ ಗಾಂಧಿಯನ್ನು ಪರಿಗಣಿಸಬೇಕು. ಅದೆಲ್ಲಾ ನೊಬೆಲ್ ಕಾಯಿದೆಯಲ್ಲಿ ಇಲ್ಲದ್ದು. ಆದರೇನಂತೆ ನಾಮಕರಣಗೊಂಡ ಹೆಸರನ್ನು ಪ್ರಸ್ತಾಪಿಸಲು ಸಾಧ್ಯಾವಾಯಿತಾದರೂ ಕಾಯಿದೆಯಂತೆ ಮರಣೋತ್ತರ ಪುರಸ್ಕಾರ ಸಾಧ್ಯವಿಲ್ಲ ಎಂಬ ಮಾತೇ ಮುಖ್ಯವಾಯಿತು. ಒಂದು ವೇಳೆ ಎಲ್ಲವನ್ನೂ ಕಡೆಗಣಿಸಿ ನೀಡಿದರೂ ಬಹುಮಾನವನ್ನು ನೀಡುವುದಾದರೂ ಯಾರಿಗೆ? ಇದು ಸಮಿತಿಯ ಪ್ರಶ್ನೆಯಾಗಿತ್ತು. ಏಕೆಂದರೆ ಗಾಂಧೀಜಿಯು ತನ್ನ ವಾರಸುದಾರಿಕೆಯನ್ನು ಉಳಿಸಿರಲಿಲ್ಲ. ಒಂದೇ ವಿಲ್ಲೂ ಸಹಾ ಗಾಂಧಿಯಿಂದ ಇರಲಿಲ್ಲ. ಹಾಗಾಗಿ ಬಹುಮಾನದ ಮೊತ್ತವನ್ನು ಕೊಡಲು ಸಾಧ್ಯವಾಗುವುದೇ ಇಲ್ಲ ಎಂದು ಸಮಿತಿಯು ತಳ್ಳಿ ಹಾಕಿತು. ಒಟ್ಟಾರೆ ಗಾಂಧಿಗೆ ನೊಬೆಲ್ ಶಾಂತಿ ಪುರಸ್ಕಾರ ಬರಲಿಲ್ಲ. ಆದರೆ ಸಮಿತಿಯು ಒಂದು ಜಾಣತನ ಪ್ರದರ್ಶಿಸಿ ಆ ವರ್ಷ ಶಾಂತಿ ಪುರಸ್ಕಾರವನ್ನು ಯಾರಿಗೂ ಕೊಡಲಿಲ್ಲ. ಗಾಂಧಿಯನ್ನು ಪುರಸ್ಕರಿಸುವ ಅವಕಾಶವನ್ನು ನೊಬೆಲ್ ಬಹುಮಾನ ಶಾಶ್ವತವಾಗಿ ಮಿಸ್ ಮಾಡಿಕೊಂಡಿತು. ಗಾಂಧಿಯ ಹಾದಿಯಲ್ಲಿ ನಡೆದ ಆಲ್ಬರ್ಟ್ ಶುಯೆಟ್ಜರ್, ನೆಲ್ಸನ್ ಮಂಡೇಲಾ, ಕೈಲಾಸ್ ಸತ್ಯಾರ್ಥಿ ಮುಂತಾದ ಅನೇಕರು ನೊಬೆಲ್ ಪುರಸ್ಕೃತರಾಗಿದ್ದಾರೆ. ಗಾಂಧಿ ಮಾತ್ರ ಅಪೂರ್ವ ವ್ಯಕ್ತಿಯಾಗಿಯೇ ಉಳಿದರು.

ಮನದ ಮಾತೇಕೆ ಕಿವಿಗೆ ಕೇಳುವಂತಾಗಲಿ

ಹೊಸ ಹುಡುಗರ ಪಡೆ ನಾಡು ಕಟ್ಟಲಿ, ಆತ್ಮಶಕ್ತಿಯನ್ನು ಪ್ರಭೆಯಲ್ಲಿ ಪ್ರತಿಭೆಗಳು ಅರಳಲಿ,

–ಗುಬ್ಬಿಗೂಡು ರಮೇಶ್

'ಮನಸು ಹೇಳಬಯಸಿದೆ ನೂರೊಂದು, ತುಟಿಯ ಮೇಲೆ ಬಾರದಿದೆ ಮಾತೊಂದು' ಮನಸ್ಸೆಂಬುದು ಮರ್ಕಟವಯ್ಯ ಮನಸ್ಸೇ ರಿಲ್ಯಾಕ್ಸ್ ಪ್ಲೀಸ್ - ಹೀಗೆ ಮನಸ್ಸಿನ ಬಗ್ಗೆ ನೂರು ಮಾತುಗಳು, ಸಾವಿರ ಹಾಡುಗಳು, ಹತ್ತಾರು ನಾಣ್ನುಡಿಗಳು. ಮನುಷ್ಯನ ಅಂಗ ರಚನಾ ಶಾಸ್ತ್ರದ ಯಾವ ಪುಟವನ್ನೇ ತಿರಿವಿ ಹಾಕಿದರೂ ಅಲ್ಲಿ ಮನಸ್ಸೆಂಬುದಿಲ್ಲ. ಮನುಷ್ಯನ ದೇಹದಲ್ಲಿ ಹೃದಯವಿದೆ, ಶ್ವಾಸಕೋಶವಿದೆ, ಉದರವಿದೆ, ಅಧರವಿದೆ, ಕಣ್ಣಿದೆ, ಕೈಯ್ಯಿದೆ, ಕಾಲಿದೆ. ಆದರೆ ಈ ಮನಸ್ಸೆಂಬುದು ಯಾವ ಜಾಗದಲ್ಲಿದೆ ಎಂಬುದೇ ಪ್ರಶ್ನೆ. ಜಗತ್ತಿನ ವೈದ್ಯವಿಜ್ಞಾನ ಶಾಸ್ತ್ರದ ತಿಳುವಳಿಕೆಯ ಪ್ರಕಾರ ಮನಸ್ಸೆಂಬುದು ಎಲ್ಲಿದೆ ಎಂಬುದು ಖಾತ್ರಿಯಾಗಿಲ್ಲ. ಆದರೆ ಜಗತ್ತು ಮಾತ್ರ Soul ಎಂಬ ಈ ಮನಸ್ಸನ್ನು ದೂಸರ ಮಾತಿಲ್ಲದೆ ಒಪ್ಪಿಕೊಂಡಿದೆ. ನಮ್ಮ ಮಾತು–ಕತೆ, ಹಾಡು–ಹಸೆ, ಬರಹ–ವಿರಹ, ಯಾವುದೂ ಮನಸ್ಸಿಲ್ಲದೆ ನಡೆಯುವುದೇ ಇಲ್ಲ. ಅದು ಅನುಭೂತಿಯನ್ನು ಜಿಜಜಿಟ ಮಾಡುವ ಅದ್ಭುತ ಜೀವ ಲೋಕ. ಸಾಧಕರೆಲ್ಲರೂ ತಮ್ಮ ಜೀವಮಾನ ಸಾಧನೆಗೆ ಬಳಸಿಕೊಂಡಿದ್ದೆ ಈ ಮನಸ್ಸನ್ನು. ಹೀಗೆ ಮನಸ್ಸು ಮಾಡಿದವರನ್ನು ಒಮ್ಮೆ ಮನಸ್ಸಿಟ್ಟು ನೋಡಿ; ಇಂಗ್ಲೀಷ್ ಕಾವ್ಯಲೋಕವನ್ನು ಆಳಿದ ಶ್ರೇಷ್ಠ ಕವಿ ಜಾನ್ ಮಿಲ್ಟನ್ ಕುರುಡ. ಅವನಿಗೆ ಕಣ್ಣೇ ಕಾಣುತ್ತಿರಲಿಲ್ಲ. ಮನದ ಮಾತು ಕಿವಿಗೆ ಕೇಳದಿದ್ದರೆ ಮಿಲ್ಟನ್ ಇವತ್ತು ಕಾಮನ್‌ವೆಲ್ತ್ ಲಿಟರೇಚರಿನಲ್ಲಿ ಬಹುದೊಡ್ಡ ಭಾಗವಾಗಿ ಉಳಿಯುತ್ತಿರಲಿಲ್ಲ. ಮತ್ತೊಬ್ಬ ದೊಡ್ಡ ಕವಿ ಬೈರನ್ ಕಿವುಡ. ತನ್ನ ದಿಗ್ವಿಜಯಗಳ ಮೂಲಕ ಇಡೀ ಯುರೋಪಿನ ನಕಾಶೆಯನ್ನೇ ಬದಲಾಯಿಸಿದ ನೆಪೋಲಿಯನ್ ಬೋನಾಪಾರ್ಟೆ (೧೭೯೯ ರಿಂದ ೧೮೧೫ ರವರೆಗೆ) 'ನೆಪೋಲಿಯನ್ ಯುಗ'ವನ್ನೇ ಸೃಷ್ಟಿಸಿದ. ಈತ ಚರ್ಮರೋಗದಿಂದ ಬಳಲುತ್ತಿದ್ದ. ನಮ್ಮ ಕನ್ನಡದ ನಟಿ ಮಿನುಗು ತಾರೆ ಕಲ್ಪನಾಗೆ ಕೂಡ ಚರ್ಮರೋಗವಿತ್ತು. ಅವಳು ಎಳನೀರಿನಲ್ಲಿ ಮುಖ ತೊಳೆಯುತಿದ್ದಳು. ಕೆರೆದರೆ ಮೈಮೇಲಿನ ಚರ್ಮ ಹಾವಿನ ಹುರುಪೆಯಂತೆ

ಉದುರುತ್ತಿತ್ತು. ಮಂಗಳೂರಿನಿಂದ ಬೆಂಗಳೂರಿನವರೆಗೆ ಸಾಗಿದ ಅವಳು ನಟಿಯಾದಳು, ಬೆಳ್ಳಿತೆರೆಯಲ್ಲಿ ಮಿನುಗು ತಾರೆಯಾದಳು. ತಾನು ನಟಿಯಾಗಲೇಬೇಕೆಂಬ ಮನದ ಮಾತು ಕಿವಿಗೆ ಕೇಳುತ್ತಿತ್ತು. ನಟಿಯಾದಳು. ರೋಮ್ ನಗರದ ಚಕ್ರವರ್ತಿ ಜೂಲಿಯಸ್ ಸೀಸರ್ ಮೂರ್ಛೆ ರೋಗದಿಂದ ಬಳಲುತ್ತಿದ್ದ. ಪರಮಾಪ್ತರಿಂದಲೇ ಹತನಾಗಿ ಹೋದ ಸೀಸರ್ ತನ್ನ ಪ್ರತಿಕಾರಕ್ಕಾಗಿ ಮಾರ್ಕ್‌ಆ್ಯಂಟೋನಿಯಂಥಾ ಗೆಳೆಯನನ್ನು ಪಡೆದ. ಸಾವಿನ ನಂತರವೂ ಜಗತ್ಪ್ರಸಿದ್ಧನಾದ. ಜಗತ್ತಿನಲ್ಲೇ ಮಹಾವಾಗ್ಮಿ ಎಂದು ಗುರುತಿಸಿಕೊಂಡಿದ್ದ ಡಿಮೋಸ್ತನೀಸ್ ಮಾತನಾಡುವಾಗ ತೊದಲುತ್ತಿದ್ದ. ಆದರೆ ತನ್ನ ಅಂಗ ವೈಕಲ್ಯದಿಂದ ಅವನು ಕೊರಗುತ್ತಾ ಕೂರಲಿಲ್ಲ. ಮನಸ್ಸಿನಲ್ಲಿಯೇ ಮಾತನಾಡಿದ, ತಾನೊಬ್ಬ ದೊಡ್ಡ ಮಾತುಗಾರನಾಗಬೇಕೆಂಬ ಹಂಬಲ ಹುಟ್ಟಿತ್ತು. ಅದಕ್ಕಾಗಿ ಆತ್ಮಬಲ ಹೆಚ್ಚಾಯಿತು. ಮನದ ಮಾತು ಕಿವಿಗೆ ಕೇಳುತ್ತಿತ್ತು. ಕೇವಲ ಎಂಟು ರೂಪಾಯಿಗೆ ಸಿಮ್ಲಾದ ಹೋಟೆಲೊಂದರಲ್ಲಿ ಸಂಬಳಕ್ಕಿದ್ದ ಒಬೇರಾಯ್ ಮುಂದೆ ಒಬೇರಾಯ್ ಗ್ರೂಪ್ ಆಫ್ ಹೋಟೆಲ್ಸ್‌ನ ಮಾಲೀಕನಾದ. ಜೆಆರ್‌ಡಿ ಟಾಟಾ, ಧೀರೂಬಾಯ್ ಅಂಬಾನಿ ೫೦೦ ರೂಪಾಯಿಯಲ್ಲಿ ಉದ್ಯಮ ಪ್ರಾರಂಭಿಸಿದರು. ಇವರಿಗೆಲ್ಲ ಮನದ ಮಾತು ಕಿವಿಗೆ ಕೇಳುತ್ತಿತ್ತು. ಅವರಿಗೆ ಆತ್ಮಬಲ ದಾರಿದೀಪವಾಗಿತ್ತು. ತಿನ್ನಲೂ ಗತಿಯಿಲ್ಲದೆ ಬಡತನದಿಂದ ನರಳುತ್ತಾ ಹೈಸ್ಕೂಲ್ ಕೂಡ ದಾಟದ ಹುಡುಗ ಬದುಕಿಗಾಗಿ ಪುಸ್ತಕದಂಗಡಿಯಲ್ಲಿ ಕೆಲಸಕ್ಕೆ ಸೇರಿದ. ಮುಂದೆ ಅವನೇನಾದ ಗೊತ್ತೆ? ಜಗತ್ತಿನ ದೊಡ್ಡ ಭೌತವಿಜ್ಞಾನಿಯಾದ. ನಮ್ಮ ಕೈಗೆ ಜನರೇಟರ್ ಕೊಟ್ಟ, ಡೈನಮೋಗಳನ್ನು ಕೊಟ್ಟ. ಜನರೇಟರ್ ಜನಕ ಎನಿಸಿಕೊಂಡ ಮೈಕೆಲ್ ಫಾರಡೆ. ಅವನು ಪುಸ್ತಕದಂಗಡಿಯಲ್ಲಿ ಕೆಲಸ ಮಾಡುವಾಗಲೇ ಅಧ್ಯಯನದ ಆಸಕ್ತಿಗಳು ಮನದ ಮಾತಾಗಿ ಪರಿವರ್ತಿತವಾಗಿ ಕಿವಿಗೆ ಕೇಳುತ್ತಿತ್ತು.

ಶ್ರೀಮಂತ ಮನೆತನದಲ್ಲಿಯೇ ಹುಟ್ಟಿದರೂ ತಂದೆ ವಿಶ್ವನಾಥದತ್ತರ ಅಕಾಲಿಕ ಮರಣದಿಂದಾಗಿ ಕಷ್ಟಗಳ ಸುಳಿಗೆ ಸಿಲುಕಿದ ನರೇಂದ್ರ ಇನ್ನೂ ವಿದ್ಯಾರ್ಥಿಯಾಗಿರುವಾಗಲೇ ಸಾಲಗಾರರ ಬಾಧೆ ತಾಳಲಾರದೆ ಎಂಟು ಜನರನ್ನು ಮನೆಯಲ್ಲಿ ಸಾಕಬೇಕಾದ ಜಂಜಾಟದಲ್ಲಿ ಸಿಲುಕಿ ಕುಂದಿ ಹೋದರೂ, ಭರತಖಂಡದ ನಂದಾದೀಪವಾಗಿ ಹೊರಹೊಮ್ಮಿ ಸ್ವಾಮಿ ವಿವೇಕಾನಂದರಾದ ಕಥೆಗೆ ಪ್ರೇರಣೆ ಮನದ ಮಾತು ಕಿವಿಗೆ ಕೇಳುತ್ತಿತ್ತು.

ಹತ್ತನೇ ತರಗತಿಯ ಫಲಿತಾಂಶ ಪ್ರಕಟವಾಗಿತ್ತು. ಹುಡುಗನೊಬ್ಬ ಆಗತಾನೆ ಫಲಿತಾಂಶ ಪಟ್ಟಿಯಲ್ಲಿ ರಿಜಿಸ್ಟರ್ ನಂಬರ್ ಹುಡುಕಿದ. ಇರಲಿಲ್ಲ.

ಮುಖ್ಯೋಪಾಧ್ಯಾಯರಲ್ಲಿ ವಿಚಾರಿಸಿದ. ನಿನ್ನ ನಂಬರ್ ಇಲ್ಲವೆಂದ ಮೇಲೆ ನೀನು ಫೇಲಾಗಿದ್ದೀಯೇ ಎಂದರ್ಥ ಹೋಗು ಎಂದು ಗದರಿಸಿದರು ಹೆಡ್‌ಮಾಸ್ಟರ್. ಹುಡುಗ ಹಠ ಮಾಡಿದ. 'ಇಲ್ಲ ಸಾರ್ ನನ್ನ ಮನಸ್ಸಿಗೆ ಗೊತ್ತಿದೆ ನಾನು ಪಾಸಾಗಿದ್ದೇನೆ'-ಮತ್ತೊಮ್ಮೆ ನೋಡಿ ಎಂದು ಗಟ್ಟಿ ಧ್ವನಿಯಲ್ಲಿ ಕೇಳಿದ. ಸಿಟ್ಟು ಬಂದ ಮುಖ್ಯೋಪಾಧ್ಯಾಯರು ಹುಡುಗನ ಮೊಂಡುತನಕ್ಕೆ ಬೇಸತ್ತು ಆಣೆ ಲೆಕ್ಕದಲ್ಲಿ ದಂಡ ಹಾಕಿದರು. ಅಷ್ಟರಲ್ಲಿ ಓಡಿ ಬಂದ ಗುಮಾಸ್ತ ಆ ಹುಡುಗ ಆ ಶಾಲೆಗೆ ಮೊದಲ ಶ್ರೇಣಿಯಲ್ಲಿ ಪಾಸಾಗಿದ್ದಾನೆಂದು ತಿಳಿಸಿದ. ಬೇರೆಯುದೇ ಕವರಿನಲ್ಲಿ ಬಂದ ಇಲಾಖೆಯು ಆ ಮಾಹಿತಿಯುನ್ನು ಮುಖ್ಯೋಪಾಧ್ಯಾಯರಿಗೆ ತೋರಿಸಿದ. ಬೇಸ್ತು ಬಿದ್ದ ಮುಖ್ಯೋಪಾಧ್ಯಾಯರು ಕೇಳಿದರು! 'ಏನಪ್ಪ ನಿನ್ನ ಬಗ್ಗೆ ನಿನಗೆ ಅಷ್ಟೊಂದು ನಂಬಿಕೆಯಾ?' ವಿದ್ಯಾರ್ಥಿ ಅದಕ್ಕೆ ಉತ್ತರಿಸಿದ 'ಮನದ ಮಾತು ಕಿವಿಗೆ ಕೇಳುತ್ತಿತ್ತು'. ಮುಂದೆ ಆ ಹುಡುಗ ಏನಾದ ಗೊತ್ತೆ? ಈ ದೇಶದ ಮೊದಲ ರಾಷ್ಟ್ರಾಧ್ಯಕ್ಷನಾದ. ಅವರೇ ಬಾಬು ರಾಜೇಂದ್ರ ಪ್ರಸಾದ್.

ಇಷ್ಟೆಲ್ಲಾ ವೃತ್ತಾಂತಗಳು ಯಾಕಾಗಿ ಎಂದು ನಮ್ಮನ್ನು ನಾವು ಕೇಳಿಕೊಂಡರೆ, ಶಾಲೆಗಳು ತೆರೆದಿವೆ. ತರಗತಿಗಳು ಪ್ರಾರಂಭವಾಗಿವೆ. ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಎಲ್ಲ ಶಿಕ್ಷಕರು ಸಾಮಾನ್ಯವಾಗಿ ಒಂದು ಪ್ರಶ್ನೆ ಕೇಳುತ್ತಾರೆ. ಅದು ನಿಮಗೂ ನೆನಪಿರಬೇಕು. 'ಮುಂದೆ ನೀನೇನಾಗಬೇಕೆಂದಿರುವೆ?' ಈವತ್ತಿನ ಮಕ್ಕಳ ಉತ್ತರ ತುಂಬ ಸರಳ. ನಾನು ಡಾಕ್ಟರಾಗುತ್ತೇನೆ. ಸಾಫ್ಟ್‌ವೇರ್ ಎಂಜಿನಿಯುರಾಗುತ್ತೇನೆ. ಅಂದಹಾಗೆ ಕೋಟಿ ಕೋಟಿ ಡಾಕ್ಟರ್‌ಗಳು, ಎಂಜಿನಿಯರುಗಳು ಸೃಷ್ಟಿಯಾದ ಈ ದೇಶದಲ್ಲಿ ಮತ್ತೆ ಒಬ್ಬ ವ್ಯಾಸ ಹುಟ್ಟಲಿಲ್ಲ, ಒಬ್ಬ ವಾಲ್ಮೀಕಿ ಹುಟ್ಟಲಿಲ್ಲ. ಬದಲಿಗೆ ಡಾಲರ್ ಅನ್ನು ರೂಪಾಯಿಗೆ ಪರಿವರ್ತಿಸುವ ಹಣ ದ್ವಿಗುಣಗೊಳಿಸುವ ಮೆಷಿನ್ನುಗಳು ಹುಟ್ಟಿದವು. ಅದಕ್ಕೆ ಇಂಬು ಕೊಟ್ಟಂತೆ ಪೋಷಕ ಪಡೆ ನಿಂತಿತು. ಮನದ ಮಾತು ಕಿವಿಗೆ ಕೇಳಲೇ ಇಲ್ಲ.

ನಮ್ಮ ಅಸಂಖ್ಯಾತ ಹುಡುಗ – ಹುಡುಗಿಯರ ಮನದಾಳದಲ್ಲಿ ಹುಟ್ಟಿದ ಮಾತು ಕಿವಿಗೆ ಕೇಳಲಿ. ಡಿ.ವಿ.ಜಿಯವರ ಮಾತಿನಂತೆ 'ಧಾರುಣಿಯ ನಡುಗೆಯಲಿ ಮೇರುವಿನ ಗುರಿಯಿರಲಿ' ಹೊಸ ಹುಡುಗರ ಪಡೆ ನಾಡು ಕಟ್ಟಲಿ ತಮ್ಮ 'ಆತ್ಮಶಕ್ತಿಯ ಪ್ರಭೆಯಲ್ಲಿ ಪ್ರತಿಭೆಗಳು ಅರಳಲಿ.

ನಾಲ್ಕು ನಿಟ್ಟಿನಿಂದ...

೧. ಬಹುತ್ವ ಎಂದರೆ – ನಮ್ಮ ಮತಧರ್ಮ, ಆಚರಣೆ , ನಂಬಿಕೆಗಳ ಬಗ್ಗೆ ಮಾತ್ರ ಯೋಚನೆ ಮಾಡುವುದಲ್ಲ. ನೋವಿನ ಬಹುತ್ವದ ಬಗ್ಗೆಯೂ ಯೋಚನೆ ಮಾಡಬೇಕು. ಅಮೇರಿಕದ ವಾಣಿಜ್ಯ ಸಂಕೀರ್ಣದ ಮೇಲೆ ನಡೆದ ದಾಳಿ ಖಂಡನಾರ್ಹ. ಅದಾಗಿ ವರ್ಷಗಳೇ ಸಂದವು. ಅದನ್ನು ಹಿಡಿದುಕೊಂಡು ಆಫ್ಘಾನಿಸ್ತಾನ ಮತ್ತು ಇರಾಕಿನಲ್ಲಿ ಜನರ ಮಾರಣಹೋಮ ನಡೆಯುತ್ತಿರುವಾಗ ಆ ನೋವನ್ನು ಪರಿಗಣಿಸಬೇಕಲ್ಲವೆ?

– ರಾಜಶೇಖರ .ಜಿ

೨. ಕಾವೇರಿ ನದಿ ನೀರಿನ ವಿವಾದವನ್ನು ನ್ಯಾಯಾಲಯ ತೀರ್ಮಾನಿಸುವ ಸಂಗತಿಯಲ್ಲ. ನೀರಾವರಿ ತಜ್ಞರು, ಕೃಷಿ ತಜ್ಞರು, ಸೇರಿಕೊಂಡು ರಚಿತವಾದ ಒಂದು ನಿಷ್ಪಕ್ಷ, ಕಾವೇರಿ ನದಿ ಹರಿವಿಗೆ ಸೇರದ ರಾಜ್ಯಗಳ ತಜ್ಞರ ತಂಡ ತೀರ್ಮಾನಿಸಬೇಕಾದ ಸಂಗತಿ ಎಂದು ಕಳೆದ ೨೬ ವರ್ಷಗಳಲ್ಲಿ ಕಂಡುಕೊಳ್ಳಲು ನಮಗೆ ಆಗಿಲ್ಲ. ಅಂಥ ಒಂದು ತಂಡವೇ ಅಸ್ತಿತ್ವದಲ್ಲಿ ಇಲ್ಲದೆ ಇರುವುದು ನಾಯಕತ್ವದ ದಿವಾಳಿಕೋರತನವನ್ನು ಅಥವಾ ರಾಜಕಾರಣದ ಖದೀಮತನವನ್ನು ತೋರಿಸುತ್ತಿರಬಹುದು! ನೈಜ ಪರಿಹಾರ ಯಾರಿಗೂ ಬೇಕಿರುದೇ ಇಲ್ಲವೇನೋ? ಪರಿಹಾರ ಸಿಕ್ಕರೆ ರಾಜಕೀಯ ಮಾಡಲು ಅವಕಾಶವೇ ಇರುವುದಿಲ್ಲವಲ್ಲ? – ಪದ್ಮರಾಜ ದಂಡಾವತಿ

೩. ನಾನೊಂದು ಕಥೆಯನ್ನು ಕೇಳಿದ್ದೆ. ಸಾವಿರಾರು ವರ್ಷಗಳ ಹಿಂದೆ ದೇವಸ್ಥಾನಗಳ ನಗರವೊಂದು ಸಾಗರದಲ್ಲಿ ಮುಳುಗಿ ಹೋಗಿತ್ತು. ಆ ದೇವಸ್ಥಾನದ ಗಂಟಾನಾದ ಇಂದಿಗೂ ಕೇಳಿ ಬರುತ್ತಿದೆ. ಸಾಗರದ ಅಲೆಗಳ ತುಯ್ದಾಟದಿಂದ ಅಥವಾ ಮೀನುಗಳ ಒಡನಾಟದಿಂದೆ ಆ ಗಂಟಾ ನಾದವು ಉದ್ಭವಿಸುತ್ತಿರಬಹುದು. ಆ ಗಂಟಾನಾದದ ಸಂಗೀತ ಕೇಳಿಸಿಕೊಳ್ಳುವ ಹಂಬಲ ನಿಮಗಿದೆಯೆ? ಹಾಗಿದ್ದಲ್ಲಿ ನಿಮ್ಮಲ್ಲೇ ಒಳಗೆ ಹೋಗಿ. ನಿಮ್ಮ ಹೃದಯವೇ ಆ ಸಾಗರ, ಆಳದಲ್ಲೆ ಪರಮಾತ್ಮನ ನಗರ ಇರುವುದು. ಆದರೆ ನೆನಪಿರಲಿ, ಆ ಸಂಗೀತವನ್ನು ಕೇಳಿಸಿಕೊಳ್ಳಲು ತಮ್ಮೊಳಗೆ ಸಂಪೂರ್ಣ ಶಾಂತತೆ ಹಾಗೂ ಶೂನ್ಯತೆಯನ್ನು ಹೊಂದಿರುವವರು ಮಾತ್ರವೇ ಅರ್ಹರು. ವಿಚಾರ ಮತ್ತು ಬಯಕೆಗಳ ಕೋಲಾಹಲವಿರುವಲ್ಲಿ ಆ ಸಂಗೀತವು ಹೇಗೆತಾನೆ ಕೇಳಿಸಲು ಸಾಧ್ಯ? ಆ ಸಂಗೀತವನ್ನು ಕೇಳಿಸಿಕೊಳ್ಳಬೇಕೆಂಬ ಬಯಕೆಯೂ ಒಂದು ಅಡ್ಡ ಗೋಡೆಯಾಗುತ್ತದೆ. – ಓಶೋ

೪. ನಮ್ಮ ಆಹಾರ ಕ್ರಾಂತಿಕಾರಕವಾಗಿರಬಹುದು. ಆದರೆ ನಮ್ಮ ಪಚನ ಕ್ರಿಯೆ ಸ್ವಾಭಾವಿಕವಾಗಿಯೇ ಇರಬೇಕಾಗುವದು. – ವಿಕ್ರಮ್ ಸೋನಿ

ಸರ್ವೋದಯ ಆಂದೋಲನದ ಮುನ್ನಡೆ...

ಈ ಮೊದಲು ಪ್ರಕಟಿಸಿದಂತೆ ೨೦೧೬ ಡಿಸೆಂಬರ್ ಹತ್ತು ಮತ್ತು ಹನ್ನೊಂದನೇ ದಿನಾಂಕಗಳಲ್ಲಿ ಮಂಡ್ಯ ಜಿಲ್ಲೆ ಮೇಲುಕೋಟೆಯಲ್ಲಿ ಕರ್ನಾಟಕ ರಾಜ್ಯ ಪ್ರಥಮ ಸರ್ವೋದಯ ಸಮಾಜ ಸಮ್ಮೇಳನ ನಡೆಯಲಿದೆ ಎಂದು ತಿಳಿಸಲು ಸಂತೋಷವಾಗುತ್ತದೆ. ಸಮ್ಮೇಳನವನ್ನು ಗುಜರಾತ್ ಗಾಂಧೀವಿದ್ಯಾಪೀಠದ ಉಪಕುಲಪತಿಗಳಾಗಿದ್ದ ಮತ್ತು ಹಿರಿಯ ಗಾಂಧೀ ವಿಚಾರ ಚಿಂತಕರಾದ ಶ್ರೀ ಸುದರ್ಶನ ಅಯ್ಯಂಗಾರ್‌ರವರು ಉದ್ಘಾಟಿಸಲ್ಲಿದ್ದಾರೆ. ಅದರ ಅಧ್ಯಕ್ಷತೆಯನ್ನು ಅಖಿಲ ಭಾರತ ಸರ್ವೋದಯ ಮಂಡಳಿಯ ಅಧ್ಯಕ್ಷರಾದ ಶ್ರೀ ಮಹಾದೇವ್ ವಿದ್ರೋಹಿರವರು ವಹಿಸಲ್ಲಿದ್ದಾರೆ.

ಸಮ್ಮೇಳನಕ್ಕೆ ಸಂಬಂಧಿಸಿದ "ನಿವೇದನೆ" ಈ ಕೆಳಗಿನಂತಿದೆ.

ನಿವೇದನೆ

ಪ್ರಚಲಿತ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಿದ್ಧಾಂತಗಳು ಜನರ ಜೀವನಮಟ್ಟವನ್ನು ಸುಧಾರಿಸುವಲ್ಲಿ ನಿರೀಕ್ಷಿತ ಗುರಿ ತಲುಪಲು ಈ ವರಗೆ ಸಾಧ್ಯವಾಗಿಲ್ಲ. ಸ್ವಾತಂತ್ರ್ಯಾನಂತರದ ಬಹುಪಾಲು ಚುನಾಯಿತ ಸರ್ಕಾರಗಳೂ ಆರೋಗ್ಯವಂತ ಸಮಾಜವನ್ನು ನಿರ್ಮಿಸುವಲ್ಲಿ ಸೋತಿವೆ. ಜಗತ್ತಿನಲ್ಲಿ ದೇಶ–ವಿದೇಶಗಳ ಮಧ್ಯೆ ವಿವಾದಾತ್ಮಕ ವಿಷಯಗಳಿಂದಾಗಿ ಸಂಘರ್ಷವುಂಟಾಗುತ್ತಾ ಇದೆ. ಜಗತ್ತಿನಲ್ಲಿ ಒಂದಲ್ಲ ಒಂದು ಕಡೆ, ಒಂದಲ್ಲ ಒಂದು ಕಾರಣಕ್ಕಾಗಿ ಅಘೋಷಿತ ಯುದ್ಧಗಳು, ಆಂತರಿಕ ಸಂಘರ್ಷಗಳು ನಡೆಯುತ್ತಲೆ ಇವೆ. ಧರ್ಮದ ಹೆಸರಿನಲ್ಲಿ ಉಗ್ರವಾದಿ ಸಂಘಟನೆಗಳು ಹುಟ್ಟಿಕೊಂಡು ಮಕ್ಕಳಾದಿಯಾಗಿ ಅಮಾಯಕರನ್ನು ಸಾಯಿಸುತ್ತ ಇವೆ, ಜಗತ್ತಿನ ಎಲ್ಲ ದೇಶಗಳು ದೊಡ್ಡ ಪ್ರಮಾಣದಲ್ಲಿ ಭಯಾನಕ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿವೆ. ಇಡೀ ಭೂಮಂಡಲ ಶಸ್ತ್ರಾಸ್ತ್ರಗಳೆಂಬ ಜ್ವಾಲಾಮುಖಿಯ ಮೇಲೆ ಕುಳಿತಂತಿದೆ. ಪರಿಸರ ನಾಶ ಮತ್ತು ಹವಾಮಾನದಲ್ಲಿಯ ವ್ಯತ್ಯಾಸ ಹಾಗೂ ಪ್ರಕೃತಿ ಸಂಪತ್ತಿನ ಲೂಟಿ ಮಾನವನ ಜೀವನ ದುಸ್ತರವಾಗುವಂತೆ ಮಾಡಿವೆ, ಅತಿಯಾದ ತಂತ್ರಜ್ಞಾನ ಮತ್ತು ವಿಜ್ಞಾನ ಮನುಷ್ಯನನ್ನು ಯಂತ್ರವನ್ನಾಗಿಸಿವೆ. ಮನುಷ್ಯನು ವಿವೇಕ ಮತ್ತು ಸ್ವಾತಂತ್ರ್ಯ ಕಳೆದುಕೊಂಡು ಶಿವನಾಗುವ ಬದಲು ಶವನಾಗಿದ್ದಾನೆ. ಈ ಗಾಢಾಂಧಕಾರದ ಮತ್ತು ಆತ್ಮಘಾತುಕ ಪರಿಸ್ಥಿತಿಯಿಂದ ಮಾನವಕುಲ

ಹೊರಬರಬೇಕಾದರೆ "ಲೋಕಾ: ಸಮಸ್ತಾ: ಸುಖಿನೋಭವಂತು" ಎಂಬ ಆಶಯವನ್ನು ಹೊಂದಿರುವ ಎರಡು ಸ್ಹಾವಿರ ವರ್ಷ ಪುರಾತನವಾದ ಸರ್ವೋದಯ ಸಿದ್ಧಾಂತವನ್ನು ಅನುಸರಿಸಬೇಕಿದೆ. ಅದರ ಅಗತ್ಯವನ್ನು ಎಲ್ಲರಿಗೂ ತಿಳಿಸುವ ಪ್ರಯತ್ನದ ಅಂಗವಾಗಿ ಕರ್ನಾಟಕ ರಾಜ್ಯ ಪ್ರಥಮ ಸರ್ವೋದಯ ಸಮಾಜ ಸಮ್ಮೇಳನವನ್ನು ಏರ್ಪಡಿಸಲಾಗಿದೆ.

ಎಂ. ಚಂದ್ರಶೇಖರ ಪ್ರತಿಷ್ಠಾನ ಬೆಂಗಳೂರು ಮತ್ತು ಶ್ರೀ ಆದಿಚುಂಚನಗಿರಿ ಸಂಸ್ಥಾನ ಮಠ, ಆದಿಚುಂಚನಗಿರಿ ಈ ಸಮ್ಮೇಳನದಲ್ಲಿ ನಮ್ಮೊಂದಿಗಿದ್ದಾರೆ. ನೀವು ಸಮ್ಮೇಳನದಲ್ಲಿ ಭಾಗವಹಿಸುವುದರ ಮೂಲಕ ರಾಷ್ಟ್ರ ನಿರ್ಮಾಣ ಕಾರ್ಯದ ಮುಖ್ಯವಾಹಿನಿಯಲ್ಲಿ ಸೇರಿಕೊಳ್ಳುವಿರಿ. ಅಲ್ಲದೆ ಇದು ಕರ್ನಾಟಕ ಸರ್ವೋದಯ ಮಂಡಲದ ಸುವರ್ಣ ಮಹೋತ್ಸವದ ಸಂದರ್ಭವೂ ಆಗಿದೆ. ದಯಾಮಾಡಿ ನೀವು ಸಮ್ಮೇಳನದಲ್ಲಿ ಭಾಗವಹಿಸಿ ವಿಚಾರಗಳನ್ನು ತಿಳಿದು ಎಲ್ಲರ ಏಳಿಗೆಯನ್ನು ಬಯಸುವ ಸರ್ವೋದಯ ಸಮಾಜ ರಚನೆಗಾಗಿ ಕೈ ಜೋಡಿಸಬೇಕಾಗಿ ವಿನಂತಿ. ನಿಮ್ಮ ಶಕ್ತ್ಯನುಸಾರ ಧನ ಧಾನ್ಯ ಕೊಟ್ಟು ಸಮ್ಮೇಳನದ ಯಶಸ್ಸಿಗೆ ಕಾರಣರಾಗಬೇಕಾಗಿ ಪ್ರಾರ್ಥನೆ.

ಸಂಪರ್ಕ:

ಸುರೇಂದ್ರ ಕೌಲಗಿ- ಮೊ: ೯೮೮೦೮೮೭೧೯೪

೦೮೨೩೬-೨೯೯೮೫೪,

ಶ್ರೀ. ಎಲ್. ನರಸಿಂಹಯ್ಯ, ಮೊ: ೯೪೪೮೦೨೭೪೦೦

ಡಾ॥ ಹೆಚ್.ಎಸ್.ಸುರೇಶ್, ಮೊ: ೯೧೪೧೭೦೦೮೧೨

೧. ಅಹಿಂಸಾಚರಣೆಗೆ ಯೋಧನಿಗಿರುವ ಧೈರ್ಯಕ್ಕಿಂತಲೂ ಹೆಚ್ಚಿನ ಧೈರ್ಯವಿರಬೇಕು.

* * *

೨. ಗಾಂಧೀಜಿಯವರ ಪ್ರಕಾರ ಪ್ರತಿಯೊಂದು ಹೊರಾಟಕ್ಕೆ ತನ್ನದೆ ಆದ ಆರೋಗ್ಯ ದಯಪಾಲಿಸುವ ಗುಣವಿದೆ.

* * *

೩. ನಾಯಕತ್ವಕ್ಕೆ ಅತ್ಯಂತ ಅಗತ್ಯವಾಗಿರುವ ಒಂದು ಗುಣವಿದೆ. ಅದು ಪ್ರಾಮಾಣಿಕತೆ ಮತ್ತು ಪಾರದರ್ಶಕ ಬದುಕು. ಇವೆರಡು ಇದ್ದರೆ ನಾಯಕತ್ವಕ್ಕೆ ಬೇಕಿರುವ ನೈತಿಕ ಬಲ ದೊರೆಯುತ್ತದೆ. ಅದು ಉಳಿದೆಲ್ಲವನ್ನು ಸರಳಗೊಳಿಸುತ್ತಾ ಹೋಗುತ್ತದೆ.

- ಸೃಜನಾನಂದ

ಜನಪದ ಸೇವಾ ಟ್ರಸ್ಟ್ ಸಮಾಚಾರ

ಅಕ್ಟೋಬರ್ ೨ ಗಾಂಧೀ ಜಯಂತಿಯ ಪ್ರಯುಕ್ತ ಮೈಸೂರು ವಿಶ್ವವಿದ್ಯಾನಿಲಯದ ಗಾಂಧೀ ಭವನ ಮತ್ತು ಮಂಡ್ಯ ಜಿಲ್ಲೆ ಭಾರತಿನಗರ ವಿದ್ಯಾಸಂಸ್ಥೆಯಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಭಾಗವಹಿಸಲಾಯಿತು. ನಂತರ ಮಂಡ್ಯದಲ್ಲಿ ನಡೆದ ಸರ್ವೋದಯ ಕಾರ್ಯಕರ್ತರ ಸಭೆಯಲ್ಲಿ ಭಾಗವಹಿಸಲಾಯಿತು. ಅಕ್ಟೋಬರ್ ೩ ರಂದು ಬೆಂಗಳೂರಿನಲ್ಲಿ ನಡೆದ ಕಾವೇರಿ ಕುಟುಂಬದ ಸಭೆಯಲ್ಲಿ ಭಾಗವಹಿಸಲಾಯಿತು.

* * *

ದಸರಾ ರಜೆಯ ಸಂದರ್ಭವನ್ನು ಉಪಯೋಗಿಸಿಕೊಂಡು ಮೇಲುಕೋಟೆ ಮತ್ತು ಸುತ್ತಲಿನ ಗ್ರಾಮದ ಮಕ್ಕಳಿಗೆ "ನವರಾತ್ರಿ" ಎಂಬ ಹೆಸರಿನಲ್ಲಿ ಮಕ್ಕಳ ಶಿಬಿರವನ್ನು ಆಯೋಜಿಸಲಾಯಿತು. ಈ ಶಿಬಿರದಲ್ಲಿ ಐವತ್ತು ಶಾಲಾ ಮಕ್ಕಳು ಭಾಗವಹಿಸಿ ಅನೇಕ ಪ್ರಕಾರದ ಕ್ರಿಯಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಅವುಗಳ ಮೂಲಕ ವ್ಯಕ್ತಿತ್ವ ವಿಕಸನದ ಲಾಭವು ಮಕ್ಕಳಿಗೆ ಆಯಿತು. ಈ ಶಿಬಿರದ ನೇತೃತ್ವವನ್ನು ಜನಪದ ಸೇವಾ ಟ್ರಸ್ಟಿನ ಹಳೆಯ ವಿದ್ಯಾರ್ಥಿಯಾದ ಶ್ರೀ ಗಿರೀಶ್ ವಹಿಸಿದ್ದರು. ಶ್ರೀ ಗಿರೀಶ್‌ರವರು ಈ ಮೊದಲು ಟ್ರಸ್ಟ್ ನಡೆಸಿದ್ದ ವಿವಿಧ ಮಕ್ಕಳ ಶಿಬಿರಗಳಲ್ಲಿ ಭಾಗವಹಿಸಿದ್ದವರು. ಶಿವಮೊಗ್ಗ ಜಿಲ್ಲೆಯ ಸಾಣೆಹಳ್ಳಿ ರಂಗಮಂದಿರದಲ್ಲಿ ತರಬೇತಿ ಪಡೆದವರು.

* * *

ಇತ್ತೀಚಿಗೆ ಕುಪ್ಪಳ್ಳಿಯಲ್ಲಿ ನಡೆದ ಸಮಾಜವಾದಿ ಅಧ್ಯಯನ ಶಿಬಿರದಲ್ಲಿ ಟ್ರಸ್ಟಿನ ಕಾರ್ಯದರ್ಶಿ ಸಂತೋಷ ಕೌಲಗಿಯವರು ಭಾಗಹಿಸಿದ್ದರು. ಅಮೇರಿಕಾ ಸಂಯುಕ್ತ ಸಂಸ್ಥಾನದಿಂದ ಇಬ್ಬರ ವಿದ್ಯಾರ್ಥಿನೀಯರು ಟ್ರಸ್ಟಿನಲ್ಲಿ ಒಂದು ವಾರ ವಾಸ್ತವ್ಯ ಮಾಡಿದ್ದರು. ಈ ಅವಧಿಯಲ್ಲಿ ಅವರು ಖಾದಿ ಉತ್ಪಾಧನೆಯ ಕೆಲಸದಲ್ಲಿ ಭಾಗವಹಿಸಿದ್ದರು. ತಮ್ಮ ವಾಸ್ತವ್ಯದ ನಂತರ ತಮ್ಮ ಅನುಭವಗಳನ್ನು ತಿಳಿಸಿ ಲೇಖನ ಬರೆದು ಕೊಟ್ಟರು. ಅದರಲ್ಲಿ ಅವರು ಬರೆದ ಮಾತೊಂದು ಹೀಗಿದೆ. "ಖಾದಿಯ ಬಗ್ಗೆ ಏನು ಗೊತ್ತಿರದ ನನಗೆ ಅದು ಕೈಯಿಂದ ತಯಾರಾಗುತ್ತದೆಂಬುದನ್ನು ತಿಳಿದ ನಂತರ ನನಗೆ ಅದರೊಂದಿಗೆ ಪ್ರೀತಿ ಉಂಟಾಯಿತು. ಆ ನಂತರ ಅದರ ತಯಾರಿಕೆಯ ಎಲ್ಲ ಪ್ರಕ್ರಿಯೆಗಳಲ್ಲಿ ಭಾಗವಹಿಸುತ್ತ ಹೋದಂತೆ ನನ್ನ ಪ್ರೀತಿ ಹೆಚ್ಚುತ್ತ ಹೋಯಿತು. ಹೆಚ್ಚು ಜನರು

ಖಾದಿಯ ಬಗ್ಗೆ ತಿಳಿದುಕೊಳ್ಳಬೇಕು ಎಂದು ನನಗೆ ಅನಿಸುತ್ತದೆ" ಎಂಬುದಾಗಿ ಎಲೆಜಿಬೆತ್ತ ರೋಜ ಜಾನ್‌ಸ್ಟೋನ್ ಹೇಳಿದರು. ಇನ್ನೊಬ್ಬ ವಿದ್ಯಾರ್ಥಿನಿಯಾಗಿದ್ದ ಶ್ರೇಯಸಾ ಮೆಹತ್ತಾ ತನ್ನ ಲೇಖನದಲ್ಲಿ ಈ ರೀತಿ ಬರೆದಿದ್ದಾರೆ. "ಮೇಲುಕೋಟೆಯಲ್ಲಿ ನಾ ಕಳೆದ ಒಂದು ವಾರದಲ್ಲಿ ಯಾವ ಪುಸ್ತಕವು ಕಲಿಸಲಾಗದಂತ ವಿಷಯವನ್ನು ಕಲಿಸಿತು. ಮುಖ್ಯವಾಗಿ ನನಗೆ ನನ್ನ ಕೈಗಳು ಎಷ್ಟು ಅಮೂಲ್ಯವಾಗಿವೆ ಎಂಬುದನ್ನು ತಿಳಿಸಿತು. ನಾನು ಸುತ್ತಿದ ದಾರ ಎಷ್ಟೇ ಅಪರಿಪೂರ್ಣವಾಗಿದ್ದರು ಕೂಡ ಆದರೆ ಪ್ರತಿಯೊಂದು ಎಳೆಯು ನನ್ನಂತೆಯೇ ಅಸ್ತಿತೆಯನ್ನು ಹೊಂದಿತ್ತು. ಯಾವ ಯಂತ್ರವೂ ಹೇಳಲಾರದ ಸಂಗತಿ". ವಾಸ್ತವ್ಯದ ಕೊನೆಯಲ್ಲಿ ಅವರಿಬ್ಬರು ಉಡುಪಿಗೆ ಭೇಟಿಕೊಟ್ಟು ಅಲ್ಲಿ ನಡೆದ ಸುಹಾಸಿನಿ ಕೌಲಗಿರವರ ಭರತನಾಟ್ಯ ಕಾರ್ಯಕ್ರಮವನ್ನು ನೋಡಿ ಮುಂದೆ ತಮ್ಮ ಪ್ರಯಾಣ ಬೆಳೆಸಿದ್ದರು.

* * *

ಬೆಂಗಳೂರಿನ ನಾಗಾರ್ಜುನ ಕಾಲೇಜಿನ ವಿದ್ಯಾರ್ಥಿಗಳ ಎರಡು ದಿನಗಳ ಶಿಬಿರ ಹೋಸ ಜೀವನ ದಾರಿ ಕೇಂದ್ರದಲ್ಲಿ ನಡೆಯಿತು. "ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಖಿನ ಜಾಗೃತಿ ಸಂಸ್ಥೆಯ ಹನ್ನೇರೆಡು ಜನ ಮಹಿಳಾ ಕಾರ್ಯಕರ್ತೆಯರು ಟ್ರಸ್ಟಿಗೆ ಭೇಟಿಕೊಟ್ಟು ಕಾರ್ಯ ಚಟುವಟಿಕೆಯನ್ನು ವಿಕ್ಷೀಸಿದರು. ಶ್ರೀಮತಿ ರಾಜರಾಜೇಶ್ವರಿ ಜೋಶಿರವರು ತಂಡದ ನೇತೃತ್ವ ವಹಿಸಿದ್ದರು. ಇವರನ್ನು ಧಾರವಾಡದ ಶಾರದಾ ಗೋಪಾಲ (ದಾದಡೆ) ಕಳುಹಿಸಿದ್ದರು".

ಸರ್ಕಾರಕ್ಕೆ ಎರಡು ತಲೆಗಳಿವೆ; ದೇಶದ ಬುದ್ಧಿ ಜೀವಿಗಳಿಗೆ ಹತ್ತು ತಲೆಗಳಿವೆ. ತಲೆಯಲ್ಲಿ ಹತ್ತಾರು ವಾದಗಳು ತುಂಬಿವೆ ಆದ್ದರಿಂದ ಗೊಂದಲ.

* * *

ಇಂದಿನ ದೊಡ್ಡಬೇಡಿಕೆ ಶಕ್ತಿ (Energy) ಇದನ್ನು ಪಡೆಯಲು ಶಕ್ತಿಯ ವಿವಿಧ ಮೂಲಗಳನ್ನು ಶೋಧಿಸಲಾಗುತ್ತಿದೆ: ಇದ್ದಲು ಶಕ್ತಿ, ಎಣ್ಣೆ ಶಕ್ತಿ. ಗಾಳಿ, ಸೌದೆ ಇತ್ಯಾದಿ. ಇದರಲ್ಲಿ ಮಾನವ ಶಕ್ತಿಯನ್ನು ಸೇರಿಸಿಲ್ಲ. ಇದು ಎಲ್ಲಕ್ಕಿಂತ ಮುಖ್ಯವಾಗಿ ಮಾನವ ಶಕ್ತಿ. ಇದನ್ನು ಉದಾಸೀನಗೊಳಿಸಿದರೆ ಪರಿಸರ ಹೆಚ್ಚು ನಾಶವಾಗುತ್ತದೆ.

* * *

ಸತ್ಯದೊಂದಿಗೆ ಎಂಬುದು ನಮ್ಮ ದಿನನಿತ್ಯದ ವ್ಯವಹಾರವಾದಬೇಕು. ಅದರಲ್ಲಿ ಧರ್ಮದರ್ಶಿತ್ವ ಒಂದು.

* * *

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ ವಿವೇಕಾನಂದ ಶಿಕ್ಷಣ ಸಂಸ್ಥೆ – ಬನ್ನೂರು, ಮೈಸೂರು

ಶ್ರೀ ಎನ್.ಎಸ್.ಸುಬ್ಬಣ್ಣ – ಬೆಂಗಳೂರು

ಶ್ರೀಮತಿ ಜ್ಯೋತಿಲಕ್ಷ್ಮೀ ಬಿ. ಆರ್ – ಚೆನ್ನೈ

ಶ್ರೀ ಗುಂಡಪ್ಪ ಗೌಡ – ಕುಂಬಾರ ಕೊಪ್ಪಲು, ಮೈಸೂರು

ಶ್ರೀ ಶಿವಣ್ಣ ಎಚ್.ಎಮ್ – ಹಾಸನ

ಶ್ರೀ ಬಿ.ಎಸ್.ವಿನಯ್ – ಮೈಸೂರು

ಶ್ರೀ ಮಧು ಅಯ್ಯಂಗಾರ – ಎಚ್.ಡಿ.ಕೋಟೆ, ಮೈಸೂರು.

ಶ್ರೀ ನಾಗರಾಜುರಾವ್ – ಮೈಸೂರು

ಶ್ರೀ ಚಂದ್ರಶೇಖರಯ್ಯ – ಪಾಂಡವಪುರ

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀಮತಿ ರಾಜರಾಜೇಶ್ವರಿ ಜೋಶಿ – ಧಾರವಾಡ

ಶ್ರೀ ಶಂಕರ ಉತ್ತುರ – ಮುಧೋಳ, ಬಾಗಲಕೋಟೆ

ಶ್ರೀ ಕೆ.ವಿ.ಪಾಂಡುರಂಗಶೆಟ್ಟಿ,

ಶ್ರೀ ಪಿ.ಎನ್, ಶ್ರೀಧರ್,

ಶ್ರೀ ಟಿ.ಎಸ್.ಶಶಿಕುಮಾರ್, – ಮೈಸೂರು.

ಸುದರ್ಶನ್ ಹೆಚ್.ಎಸ್ – ಬೆಂಗಳುರು.

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ.

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote, Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237